www.buntsanghablr.com

ಸೆಪ್ಟೆಂಬರ್ 2019
ಸಂಪುಟ 15
ಸಂಚಿಕೆ 09

# ಸ್ನೇಹ ಚಿಂತನೆ

ಮಾಸ ಪತ್ರಿಕೆ

## ಬಂಟರ ಸಂಘ ಬೆಂಗಳೂರು
## BUNTS' SANGHA BANGALORE
(A Charitable Institution)





ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಗಣೇಶ ಚತುರ್ಥಿ ಸಂಭ್ರಮ







ಸಂಘದ ಯೋಜನಾ ಸಮಿತಿಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಮಾನ್ಯ ಮುಖ್ಯಮಂತ್ರಿಗಳ ನೆರೆ ಪರಿಹಾರ ನಿಧಿಗೆ ರೂ. ಒಂದು ಕೋಟಿ ದೇಣಿಗೆ ಹಸ್ತಾಂತರಿಸಿದರು.

ಬಂಟರ ಸಂಘ
ಆರ್.ಎನ್.ಎಸ್. ವಿದ್ಯಾನಿಕೇತನ
ಸ್ವಾತಂತ್ರ್ಯ ದಿನಾಚರಣೆ



ಸಂಚಿಕೆ ಬೆಲೆ
ರೂ 1/-

324, Chord Road, Vijayanagara, Bengaluru - 560 040.
Ph: 080 2339 9323, 2339 9635, E: info@buntsanghablr.com


SEASONS GREETINGS
from
25 YEARS
Swathi GROUP
Your Happiness is our Priority
We ensure to meet the needs of our guests by providing excellent facilities. Being the best business hotel in Bengaluru, Attide hotels blends comfort and luxury to give an unparalleled experience which makes our guests visit us again in there next trip.
Attide Boutique Hotel
Swathi Group of Restaurants
Swathi Caterers
#5, West of Chord Road, Rajaji Nagar, Bengaluru - 560086 9900013400 / 8023595555
sr24@swathigroup.co.in | catering@swathigroup.co.in | info24@swathigroup.co.in swathigroup.co.in

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 15** **SEPTEMBER 2019** **ISSUE 09**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ|| ಸಂಪಾದಕರು :

**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :

**ಶ್ರೀ ಎ. ಗಿರೀಶ್ ರೈ**

**ಶ್ರೀ ಸತ್ಯಾನಂದ ಮೇಲಾಂಟ ಎನ್.**

**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :

**ಶ್ರೀ ಸುಧಾಕರ ಶೆಟ್ಟಿ, ಅಚ್ಲಾಡಿ**

**ಶ್ರೀಮತಿ ಸ್ಮಿತಾ ಬಲ್ಲಾಳ್**

**ಶ್ರೀಮತಿ ನಿರ್ಮಲಾ ಸಿ. ರೈ**

**ಶ್ರೀ ಸತೀಶ್ ಶೆಟ್ಟಿ, ವಕ್ವಾಡಿ**

**ಕುಮಾರಿ ಶಾಲ್ಮಲೀ ಸುರೇಶ್**

ಪೋಷಕ ಸದಸ್ಯರು :

**ಶ್ರೀಮತಿ ಮನೋರಮ ಚೌಟ**

**ಶ್ರೀಮತಿ ವೇದ ಎಸ್. ಶೆಟ್ಟಿ**

**ಶ್ರೀ ಬಿ. ಕುಸುಮಾಕರ ಶೆಟ್ಟಿ**

**ಶ್ರೀ ಆರ್.ಎಸ್. ಶೆಟ್ಟಿ**

**ಶ್ರೀಮತಿ ವಸಂತಿ ಪಿ. ಶೆಟ್ಟಿ**

**ಶ್ರೀ ಪ್ರಕಾಶ್ ಶೆಟ್ಟಿ**

**ಶ್ರೀ ಎ.ಜೆ. ಶೆಟ್ಟಿ**

**ಶ್ರೀಮತಿ ಗೀತ ಭಗವಾನ್‌ದಾಸ್ ರೈ**

**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**

**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :

**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕೀಯ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಬದುಕು ಮತ್ತು ಪ್ರಕೃತಿ –ವಾಸ್ತವಿಕ ಸತ್ಯ | 5 |
| 5. | ಬದುಕಿನ ಆದರ್ಶ 'ಅಪ್ಪ' | 8 |
| 6. | ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು | 10 |
| 7. | ಪೊಸ ಪುದ್ವಾರ್ | 12 |
| 8. | Professional Networking : Why Linked In ? | 14 |
| 9. | ಇದು ಬಾಪೂಜಿ ಬೆಳಗಿದ ಭಾರತ | 16 |
| 10. | ಮುಕ್ತಿ ಶಾಪದಿಂದ | 20 |
| 11. | ಬಂಟರ ಸಂಘ – ಮಹಿಳಾ ವಿಭಾಗ | 23 |
| 12. | Youth Wing | 24 |
| 13. | Bunts' Sangha R.N.S Vidyaniketan Independence Day Celebration | 30 |
| 14. | Matrimonial Services Committee | 34 |
| 15. | ಸಾಂಸ್ಕೃತಿಕ ವಿಭಾಗ | 35 |
| 16. | ಕ್ರೀಡಾ ಸಮಿತಿ | 39 |

**ಮುಖಪುಟ**

**ಗಣೇಶ ಚತುರ್ಥಿ ಸಂಭ್ರಮ, ಬಿ.ಎಸ್.ಆರ್.ಎನ್.ಎಸ್. ವಿದ್ಯಾನಿಕೇತನ - ಸ್ವಾತಂತ್ರ್ಯ ದಿನಾಚರಣೆ ಮುಖ್ಯಮಂತ್ರಿಗಳ ನೆರೆ ಪರಿಹಾರ ನಿಧಿಗೆ - ಶ್ರೀ ಕೆ.ಪ್ರಕಾಶ್ ಶೆಟ್ಟಿಯವರ ದೇಣಿಗೆ**

# ಸಂಪಾದಕೀಯ



'ಸ್ನೇಹ ಚಿಂತನೆ'ಯ ಸಂಪಾದಕನಾಗಿ ಕೆಲಸ ಮಾಡುವ ಅವಕಾಶ ನನಗೆ ಮತ್ತೊಮ್ಮೆ ದೊರಕಿದೆ. ಇದಕ್ಕಾಗಿ ನಾನು ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಿಗೆ ಆಭಾರಿಯಾಗಿದ್ದೇನೆ. ಈ ಹಿಂದಿನ ಸಂಪಾದಕಿ ಶ್ರೀಮತಿ ರಾಜಶ್ರೀ ಶೆಟ್ಟಿಯವರು ತುಂಬಾ ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಕಾರಣಾಂತರಗಳಿಂದ ಈ ಜವಾಬ್ದಾರಿಯಿಂದ ನಿರ್ಗಮಿಸಿದರು. ಅವರು ಮಾಡಿದ ಉತ್ತಮ ಕೆಲಸಕ್ಕೆ ನಾವು ಸಂಘದ ಸರ್ವಸದಸ್ಯರ ಪರವಾಗಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇವೆ.

**ಪ್ರಕೃತಿ ಮುನಿಸಿಕೊಂಡಿದ್ದಾಳೆಯೇ ಅಥವಾ ಎಚ್ಚರಿಕೆಯ ಕರೆಗಂಟೆಯೇ?** ಕಳೆದ ಒಂದು ತಿಂಗಳಿಂದ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಪ್ರಕೃತಿ ವಿಕೋಪಗಳು ನಡೆಯುತ್ತಿದ್ದು. ಜೀವ ಹಾನಿ ಅಲ್ಲದೇ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿ, ಆಸ್ತಿ ಹಾನಿ, ಸಾಂಕ್ರಾಮಿಕ ರೋಗಗಳು ಹರಡಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಅತಿಯಾದ ಮಳೆ ಮತ್ತು ಭೂಕುಸಿತದಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡರೆ ಪ್ರವಾಹದಿಂದ ಜನರು ಮನೆ, ಬೆಳೆ, ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಈ ಪ್ರಕೃತಿ ವಿಕೋಪಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ, ಬಹುಶಃ ಇದರಲ್ಲಿ ಹೆಚ್ಚಿನ ಪಾಲು ಮಾನವ ನಿರ್ಮಿತವೇ ಆಗಿರುತ್ತದೆ. ಪ್ರಕೃತಿಯ ಮೇಲೆ ಮಾನವನಿಂದ ನಿರಂತರವಾಗಿ ಶೋಷಣೆ ನಡೆಯುತ್ತಿದೆ, ಈ ಶೋಷಣೆ ವಿನಾಶಕ್ಕೆ ಕಾರಣವಾಗಲಿದೆ.

ಪ್ರಕೃತಿ ವಿಕೋಪಗಳಿಗೆ ಕಾರಣ ಮತ್ತು ಸಮಾಧಾನವನ್ನು ಕಂಡುಕೊಳ್ಳುವುದು ಈಗ ನಮ್ಮ ಮುಂದಿರುವ ಬಹು ಮುಖ್ಯವಾದ ಕೆಲಸ. ಪ್ರಕೃತಿ ವಿಕೋಪಕ್ಕೆ ಪ್ರಕೃತಿಯನ್ನು ದೂಷಿಸಿದರೆ ಪ್ರಯೋಜನವಿಲ್ಲ. ನಮ್ಮಿಂದ ನಡೆಯುತ್ತಿರುವ ಪ್ರಕೃತಿಯ ಶೋಷಣೆ ಇಂತಹ ವಿಕೋಪಗಳಿಗೆ ಕಾರಣ ಅನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ಬರೀ ಸಮಸ್ಯೆಯ ಬಗ್ಗೆ ಮಾತನಾಡದೆ ಅದರ ಪರಿಹಾರದ ಬಗ್ಗೆ ಅವಲೋಕಿಸಬೇಕು. ನಾವು ಪ್ರಕೃತಿಯ ಒಂದು ಭಾಗ. ಪ್ರಕೃತಿಯ ಬಗ್ಗೆ ನಾವು ಎಷ್ಟು ಕಾಳಜಿಯನ್ನು ತೋರುತ್ತೇವೆಯೋ ಪ್ರಕೃತಿಯೂ ನಮ್ಮ ಬಗ್ಗೆ ಅಷ್ಟೇ ಕಾಳಜಿಯನ್ನು ತೋರುತ್ತದೆ. ಎಷ್ಟೇ ಆಗಲಿ ಪ್ರಕೃತಿಯ ಶಕ್ತಿಯ ಮುಂದೆ ನಮ್ಮ ಶಕ್ತಿಯಾಗಲೀ ನಮ್ಮ ಬುದ್ಧಿಯಾಗಲೀ ಲೆಕ್ಕಕ್ಕೆ ಇಲ್ಲ.

**ಭೂ ಕುಸಿತಕ್ಕೆ ಕಾರಣಗಳು :** ನಾವು ಕಾಡನ್ನು ಕಡಿದು ಮನೆ, ರೆಸಾರ್ಟ್, ಕೃಷಿ ಭೂಮಿ ಮಾಡಿಕೊಳ್ಳುತ್ತೇವೆ. ಮರಗಳು, ಅದರಲ್ಲೂ ದಟ್ಟವಾದ ಕಾಡುಗಳು ಮಳೆ ನೀರನ್ನು ಹಿಡಿದುಕೊಂಡು ತಮ್ಮ ಬೇರುಗಳ ಮೂಲಕ ಭೂಮಿಯ ಒಳಗಡೆ ಕಳಿಸಿ ಅಂತರ್ಜಲ ವೃದ್ಧಿಯಾಗುವ ಹಾಗೆ ನೋಡಿಕೊಳ್ಳುತ್ತವೆ. ಇದಲ್ಲದೇ, ಮರದ ಬೇರುಗಳು ಮಣ್ಣನ್ನು ಗಟ್ಟಿಯಾಗಿಸುತ್ತವೆ. ಮರಗಳನ್ನು ಕಡಿಯುವುದರಿಂದ ಮೇಲ್ಮಣ್ಣು ಸಡಿಲಗೊಂಡು ಭೂ ಕುಸಿತಕ್ಕೆ ಕಾರಣವಾಗುತ್ತದೆ.

**ಪ್ರವಾಹಕ್ಕೆ ಕಾರಣಗಳು :** ನಾವು ಕೆರೆಗಳನ್ನು ಮುಚ್ಚುತ್ತಿದ್ದೇವೆ, ಮಳೆ ಹೆಚ್ಚಾದಾಗ ನೀರನ್ನು ಹೀರಿಕೊಳ್ಳುವ ಕೆರೆಗಳು, ಬಾವಿಗಳು ಮತ್ತು ಮರಗಳು ಕಡಿಮೆ ಆದಂತೆ ನೀರು ಭೂಮಿಯ ಮೇಲ್ಭಾಗದಲ್ಲೇ ಹರಿದು ಪ್ರವಾಹವಾಗುತ್ತಿವೆ. ನದಿಗಳನ್ನು ಕೂಡ ಒತ್ತುವರಿ ಮಾಡಿಕೊಂಡು ಕೃಷಿ ಭೂಮಿ ಮಾಡಿಕೊಂಡಿದ್ದೇವೆ, ಆದರೆ ನದಿಗಳು ತಮ್ಮ ಪಾತ್ರವನ್ನು ಎಂದಿಗೂ ಮರೆಯುವುದಿಲ್ಲ. ಪ್ರಕೃತಿ ವಿಕೋಪಗಳನ್ನು ತಡೆಗಟ್ಟುವುದು ಸಂಪೂರ್ಣವಾಗಿ ಸಾಧ್ಯವಾಗದಿದ್ದರೂ, ಮುನ್ನೆಚ್ಚರಿಕೆ ವಹಿಸಿ, ನಮ್ಮ ದುರಾಸೆಯನ್ನು ಕಡಿಮೆಗೊಳಿಸಿಕೊಂಡು ಪ್ರಕೃತಿಗೆ ಧಕ್ಕೆ ಆಗದಂತೆ ಬದುಕಿದರೆ ನಾವು ವಿನಾಶದಿಂದ ತಪ್ಪಿಸಿಕೊಳ್ಳಬಹುದು.

ಪ್ರಕೃತಿ ವಿಕೋಪಗಳನ್ನು ತಡೆಗಟ್ಟುವುದು ಸಂಪೂರ್ಣವಾಗಿ ಸಾಧ್ಯವಾಗದಿದ್ದರೂ, ಅವುಗಳನ್ನು ಆದಷ್ಟು ಕಡಿಮೆ ಮಾಡುವುದು ನಮ್ಮ ಕೈಯ್ಯಲ್ಲಿದೆ. ಮುನ್ನೆಚ್ಚರಿಕೆ ವಹಿಸಿ, ನಮ್ಮ ದುರಾಸೆಯನ್ನು ಕಡಿಮೆಗೊಳಿಸಿಕೊಂಡು ಪ್ರಕೃತಿಗೆ ಧಕ್ಕೆ ಆಗದಂತೆ ಬದುಕಿದರೆ ನಾವು ವಿನಾಶದಿಂದ ತಪ್ಪಿಸಿಕೊಳ್ಳಬಹುದು.

**ಎಂ. ಮುರಲೀಧರ ಹೆಗ್ಡೆ**
**hegdemm@gmail.com**

# ಅಧ್ಯಕ್ಷರ ಮಾತು



ಆತ್ಮೀಯ ಸದಸ್ಯರೇ,

ಶ್ರಿ ವರಸಿದ್ಧಿ ವಿನಾಯಕ ಮಂದಿರದಲ್ಲಿ ಗಣೇಶ ಚತುರ್ಥಿಯು ದಿನಾಂಕ 02.09.2019 ರಿಂದ 04.09.2019 ರವರೆಗೆ 3 ದಿನಗಳ ಕಾಲ ವಿವಿಧ ಪೂಜಾ ಕಾರ್ಯಕ್ರಮಗಳೊಂದಿಗೆ ಬಹಳ ವಿಶೇಷವಾಗಿ ಮೂಡಿ ಬಂತು. ಸದಸ್ಯ ಬಾಂಧವರೆಲ್ಲರೂ ತಮ್ಮ ಮನೆಯ ಕಾರ್ಯಕ್ರಮವೆಂಬಂತೆ ಬಹಳ ಶ್ರದ್ಧಾ ಭಕ್ತಿಗಳೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. 3ನೇ ದಿನದಂದು ಗಣೇಶ ಮೂರ್ತಿ ವಿಸರ್ಜನೆ ಪ್ರಯುಕ್ತ ಆಯೋಜಿಸಿದ್ದ ಹುಲಿಕುಣಿತ, ಕೀಲುಗೊಂಬೆ ಕುಣಿತ ಹಾಗೂ ವಿಸರ್ಜನಾ ಮೆರವಣಿಗೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡ ಸದಸ್ಯ ಬಾಂಧವರೆಲ್ಲರಿಗೂ ಅಭಿನಂದನೆಗಳು. ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲಾ ಸದಸ್ಯ ಬಾಂಧವರು, ಭಕ್ತಾದಿಗಳು, ದಾನಿಗಳು ಹಾಗೂ ಪ್ರಾಯೋಜಕರಿಗೆ ಹೃತ್ಪೂರ್ವಕ ವಂದನೆಗಳು. ಕಾರ್ಯಕ್ರಮವನ್ನು ಆಯೋಜಿಸುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀ ಕುತ್ಯಾರ್ ರಾಜೇಶ್ ಶೆಟ್ಟಿ, ಸಂಚಾಲಕರಾದ ಶ್ರೀ ಉಮೇಶ್ ಕುಮಾರ್ ಶೆಟ್ಟಿ ಹಾಗೂ ಪ್ರಾರ್ಥನಾ ಮಂದಿರಸಮಿತಿಯ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು.

'ವಿದ್ಯಾದೀವಿಗೆ' ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ದತ್ತು ಸ್ವೀಕಾರ

ಬೆಂಗಳೂರು ಬಂಟರ ಸಂಘವು ತನ್ನ ಆದಾಯದ ಬಹುಪಾಲನ್ನು ಆರ್ಥಿಕ ಸಹಾಯದ ಅಗತ್ಯವಿರುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುವ ವಿವಿಧ ಯೋಜನೆಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿರುವುದು ತಮಗೆಲ್ಲರಿಗೂ ತಿಳಿದ ವಿಚಾರ. ಪ್ರಸಕ್ತ ಜಾರಿಯಲ್ಲಿರುವ ವಿದ್ಯಾರ್ಥಿವೇತನ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಸಮುದಾಯ ಬಾಂಧವರ ಮಕ್ಕಳ ಶೈಕ್ಷಣಿಕ ಶುಲ್ಕವನ್ನು ಭರಿಸುವ ನಿಟ್ಟಿನಲ್ಲಿ 'ವಿದ್ಯಾದೀವಿಗೆ' ಎನ್ನುವ ನೂತನ ಯೋಜನೆ'ಯನ್ನು ಜಾರಿಗೆ ತಂದಿರುವುದು ತಮಗೆಲ್ಲರಿಗೂ ತಿಳಿದ ವಿಚಾರ. ಈ ಯೋಜನೆಗೆ ಈಗಾಗಲೇ ಸುಮಾರು 200 ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು ಕನಿಷ್ಟ 30 ಲಕ್ಷ ರೂ.ಗಳ ಅಗತ್ಯವಿದೆ. ಸಂಘದಲ್ಲಿ ವಿದ್ಯಾರ್ಥಿವೇತನಕ್ಕೆ ಸೀಮಿತ ನಿಧಿ ಮೀಸಲಿಟ್ಟಿದ್ದು, ಹೆಚ್ಚಿನ ನಿಧಿ ಕ್ರೋಢೀಕರಣಕ್ಕೆ ಸಹಕಾರ ಅತ್ಯಗತ್ಯ.

ಸದಸ್ಯ ಬಾಂಧವರು 3ನೇ ತರಗತಿಯಿಂದ 10ನೇ ತರಗತಿಯವರೆಗೆ ಶಿಕ್ಷಣ ಪಡೆಯುತ್ತಿರುವ ಆರ್ಥಿಕ ಸಹಾಯದ ಅಗತ್ಯವಿರುವ ಮಕ್ಕಳನ್ನು ದತ್ತು ತೆಗೆದುಕೊಂಡು ಅವರ ಶೈಕ್ಷಣಿಕ ಶುಲ್ಕದ ವೆಚ್ಚವನ್ನು ಭರಿಸಲು ನೆರವಾಗಬೇಕಾಗಿ ವಿನಂತಿ. ಆಸಕ್ತ ದಾನಿಗಳು ನೇರವಾಗಿ ಈ ಕೆಳಗೆ ತಿಳಿಸಿದ ಬ್ಯಾಂಕ್ ಖಾತೆಗೆ ದೇಣಿಗೆಯ ಮೊತ್ತವನ್ನು ಜಮಾ ಮಾಡಬಹುದು ಅಥವಾ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಳ್ಳಲಿಚ್ಛಿಸುವವರಿಗೆ ವಿದ್ಯಾರ್ಥಿಗಳ ವಿವರಗಳನ್ನು ನೀಡಲಾಗುವುದು.

ಪುರುಷರ 'ಬಂಟ್ಸ್ ಹಾಸ್ಟೆಲ್'ನ ಪ್ಲಾನ್ ಸಿದ್ಧವಿದ್ದು, ಕಟ್ಟಡದ ಮಾಲೀಕರೊಂದಿಗಿನ ಭೋಗ್ಯದ ಕರಾರನ್ನು ನೋಂದಣಿ ಮಾಡಿಸಲಾಗಿದೆ. ಕಟ್ಟಡದ ನವೀಕರಣ ಕಾರ್ಯವು ಶೀಘ್ರದಲ್ಲಿ ಪ್ರಾರಂಭವಾಗಲಿದೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

ವಿದ್ಯಾದೀವಿಗೆ ಯೋಜನೆಗೆ ದೇಣಿಗೆ ನೀಡಲಿಚ್ಛಿಸುವವರು **"BUNTS SANHGA VIDYARTHI VETANA DATTU NIDHI"** ಎಸ್.ಬಿ.ಅಕೌಂಟ್ ನಂ. 122001011006780, ವಿಜಯಾ ಬ್ಯಾಂಕ್, ವಿಜಯನಗರ ಶಾಖೆ, ಬೆಂಗಳೂರು ಇಲ್ಲಿಗೆ ಸಂದಾಯವಾಗುವಂತೆ ಪಾವತಿ ಮಾಡಬಹುದು.

# ಗೌರವ ಕಾರ್ಯದರ್ಶಿಗಳ ವರದಿ



ಸರ್ವರಿಗೂ ಗಣೇಶ ಚತುರ್ಥಿಯ ಶುಭಾಶಯಗಳು. ಪ್ರತೀ ವರ್ಷದಂತೆ ಈ ವರ್ಷವೂ ಶ್ರೀ ಸಿದ್ಧಿವಿನಾಯಕನ ಸನ್ನಿಧಾನದಲ್ಲಿ ಶ್ರೀ ಗಣೇಶೋತ್ಸವ ಮೂರು ದಿನಗಳ ಕಾಲ ನಿರ್ವಿಘ್ನವಾಗಿ ನಡೆಯಿತು. ಬಹಳಷ್ಟು ಜನ ಭಕ್ತಾದಿಗಳು ಬಂದು ಗಣಪತಿ ಪ್ರಸಾದ ಆಶೀರ್ವಾದ ಪಡೆದು ಸಂತುಷ್ಟರಾದರು. ಯಕ್ಷಗಾನ, ಸಂಗೀತ ಸಂಜೆ, ಗಣೇಶ ವಿಸರ್ಜನಾ ಮೆರವಣಿಗೆ ಬಹಳ ಸುಂದರವಾಗಿ ಮೂಡಿ ಬಂತು. ಅಹರ್ನಿಶಿ ದುಡಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರ್, ಸಂಚಾಲಕ ಶ್ರೀ ಉಮೇಶ್ ಕುಮಾರ್ ಶೆಟ್ಟಿ ಮತ್ತು ಸದಸ್ಯರಿಗೆ ಅಭಿನಂದನೆಗಳು. ಈ ವರ್ಷ ದೀಪಾವಳಿ ಸಂಭ್ರಮವನ್ನು ಬಹಳ ವಿಶಿಷ್ಟವಾಗಿ ನಡೆಸಬೇಕೆನ್ನುವುದು ನಮ್ಮೆಲ್ಲರ ಇಚ್ಛೆ. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಸಮಿತಿಯು ಅದರ ರೂಪ, ಚೌಕಟ್ಟನ್ನು ಸಿದ್ಧಗೊಳಿಸುತ್ತಿದೆ.

ಬಂಟರ ಸಂಘದ ಪುರುಷರ ಹಾಸ್ಟೆಲ್‌ನ್ನು ಪ್ರಾರಂಭಿಸಲು ವಿಶೇಷ ಮಹಾಸಭೆಯಲ್ಲಿ ಅನುಮತಿ ಪಡೆದ ನಂತರ, ಕೆಲಸ ಪ್ರಾರಂಭಿಸುವ ಬಗ್ಗೆ ಎಲ್ಲಾ ಪೂರ್ವ ತಯಾರಿಗಳು ನಡೆಯುತ್ತಿದೆ. ಅದರ ವಿನ್ಯಾಸ ಸಿದ್ಧವಾಗಿದ್ದು, ಇನ್ನೇನು ಕೆಲವೇ ದಿನಗಳಲ್ಲಿ ಕೆಲಸ ಪ್ರಾರಂಭವಾಗಲಿದೆ. ಈಗಾಗಲೇ ಹಾಸ್ಟೆಲ್‌ಗೆ ಬೇಡಿಕೆ ಇರುವುದರಿಂದ ತ್ವರಿತವಾಗಿ ಕೆಲಸ ಪೂರ್ಣಗೊಳಿಸಬೇಕಿದೆ.

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ –II ಇದರ ಕಾರ್ಯ ಬಹಳ ಬಿರುಸಾಗಿ ನಡೆಯುತ್ತಿದೆ. ಗುಣಮಟ್ಟವನ್ನು ಕಾಲಕಾಲಕ್ಕೆ ಯೋಜನಾ ಸಮಿತಿಯವರು ಭೇಟಿ ನೀಡಿ, ಪರಿಶೀಲಿಸಿ ಸೂಚನೆಯನ್ನು ನೀಡುತ್ತಿದ್ದಾರೆ. ಕೊಟ್ಟಿರುವ ಅವಧಿಯ ಒಳಗೆ ಕೆಲಸವನ್ನು ಪೂರ್ಣಗೊಳಿಸುವ ಹಾಗೆ ಜೀನಾ ಇಂಜಿನಿಯರಿಂಗ್‌ರವರಿಗೆ ಸೂಚನೆ ನೀಡಲಾಗಿದೆ.

ಮುಂದಿನ ಶೈಕ್ಷಣಿಕ ವರ್ಷದಲ್ಲಿ ಕೆಲವೊಂದು ತರಗತಿಗಳನ್ನು ಹೊಸ ಸಂಕೀರ್ಣದಲ್ಲಿ ಪ್ರಾರಂಭಿಸಬೇಕೆನ್ನುವ ಪೂರ್ಣ ಚಿಂತನೆ ನಮ್ಮದಾಗಿದ್ದು, ಶಾಲೆಯ ಉದ್ಘಾಟನೆಯನ್ನು ಮೇ ತಿಂಗಳಿನಲ್ಲಿ ಮಾಡುವ ಬಗ್ಗೆ ಯೋಚನೆ ಇದೆ. ಅಂದುಕೊಂಡ ಕೆಲಸಗಳು ಕ್ಲಪ್ತ ಸಮಯದಲ್ಲಿ ನಡೆಯಲೆಂದು ಶ್ರೀ ಸಿದ್ಧಿ ವಿನಾಯಕನಲ್ಲಿ ಪ್ರಾರ್ಥಿಸೋಣ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಬದುಕು ಮತ್ತು ಪ್ರಕೃತಿ – ವಾಸ್ತವಿಕ ಸತ್ಯ



ಕೆ. ನಾಗರಾಜ ಶೆಟ್ಟಿ,
ಕುಕ್ಕುಡೆಮನೆ

ಎತ್ತ ಸಾಗುತ್ತಿದೆ ಬದುಕು? ಎತ್ತ ಸಾಗುತ್ತಿದೆ ಕಾಲ? ಏನಾಗುತ್ತಿದೆ ಪ್ರಕೃತಿ? ಯಾಕಾಗುತ್ತಿದೆ ಪ್ರಾಕೃತಿಕ ಕೋಪದ ವಿಕೋಪ? ಆಳುವವರ ಆಸೆ, ಆಕಾಂಕ್ಷೆ, ದುರಾಸೆಯ ಬದುಕು ಇಂದು ಮೂರಾಬಟ್ಟೆಯಾಗುತ್ತಿದೆ ಅನಿಸುತ್ತಿಲ್ಲವೇ? ಪ್ರಜಾಪ್ರಭುತ್ವದ ವಿಡಂಬನೆ ಅಂದರೆ ಇದೇ ಅಲ್ಲವೇ? ಪ್ರಕೃತಿದತ್ತವಾಗಿ ಬಂದವುಗಳನ್ನು ನಾಶ ಮಾಡುವುದು ಎಷ್ಟು ಸರಿ? ಕಾಡುನಾಶ, ಕೆರೆಗಳ ನಾಶ, ಆಸ್ತಿ ಲಪಟಾಯಿಸುವುದು, ವಾಹನಗಳ ಭರಾಟೆ, ಕಲುಷಿತ ವಾತಾವರಣ, ಅಭಿವೃದ್ಧಿಯ ಹೆಸರಲ್ಲಿ ಪ್ರಕೃತಿಯ ಮೇಲೆ ಧಾಳಿ, ಬೆಟ್ಟಗುಡ್ಡಗಳ ನಾಶ ಇವೆಲ್ಲಾ ನೋಡಿದರೆ ಒಟ್ಟಾರೆ ನಾವು ಸಾಂಸ್ಕೃತಿಕ, ಪ್ರಾಕೃತಿಕ ವಿಕೋಪಗಳಿಗೆ ನಮ್ಮನ್ನಾಳುವವರೆ ಕಾರಣ ಅನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ಒಂದು ಕ್ಷಣ ಯೋಚಿಸಿ, ಬದುಕು ಎತ್ತ ಸಾಗುತ್ತಿದೆ? ಈ ಹಿಂದೆ ಬಡತನ ಇದ್ದರೂ ನೆಮ್ಮದಿ, ಪ್ರೀತಿ, ವಿಶ್ವಾಸ, ನಂಬಿಕೆ, ಸಂಸ್ಕೃತಿ, ಜಾತ್ಯಾತೀತತೆ ಎಲ್ಲವೂ ಇರುತ್ತಿದ್ದವು. ಕನಕದಾಸರಾದರೇನು, ಬಸವಣ್ಣನವರಾದರೇನು, ಬುದ್ಧನಾದರೇನು, ರಾಮ–ಸೀತೆಯಾದರೇನು, ಟಿಪ್ಪು ಸುಲ್ತಾನನಾದರೇನು, ಸಂತ ಶಿಶುನಾಳ ಶರೀಫರಾದರೇನು, ಏಸುಕ್ರಿಸ್ಥರಾದರೇನು ನಮಗೆ ಎಲ್ಲರೂ ಆದರ್ಶರಾಗಿದ್ದರು. ಇವರು ಯಾವ ಜಾತಿಯವರು ಅನ್ನುವ ಕಡೆ ನಮ್ಮ ಮನಸ್ಸು ಹೋಗಲೇ ಇಲ್ಲ. ನಂಬಿಕೆಯ ಕಥೆಗಳ ಜ್ಞಾನದಲ್ಲಿ ಬದುಕುತ್ತಿದ್ದೆವು. ಆದರೆ ಇಂದು ಜಾತಿ–ಜಾತಿ ಅಂತ ನಮ್ಮ ನಮ್ಮಲ್ಲೇ ಕಚ್ಚಾಡುವಂಥ ಪರಿಸ್ಥಿತಿ ಏಕಾದರೂ ಬಂತು? ಯಾರಿದಕ್ಕೆ ಹೊಣೆ? ಹಳ್ಳಿಗಳೇ ನಮಗೆ ಬದುಕಿನ ಕೊಂಡಿಗಳಾಗಿದ್ದ ಕಾಲ ಹೋಗಿ ಈಗ ನಗರಗಳೇ ಸ್ವರ್ಗ ಅನ್ನುವ ಸ್ಥಿತಿ ಈ ನಮ್ಮ ಆಳುವವರ ದುರಾಲೋಚನೆಯಿಂದ ನಿರ್ಮಿತವಾದಂತಿದೆ. ಬದುಕು ಇಂದು ಚಿಂದಿ ಚಿತ್ರಾನ್ನವಾಗುತ್ತಿದೆ. ದ್ವೇಷ ಅಸೂಯೆ ಮೇಳೈಸುತ್ತಿದೆ. ಈ ಹಿನ್ನೆಲೆಯಲ್ಲಿ ಇಂದಿನ ಯುವ ಜನಾಂಗ ಕ್ಷಣಿಕ ಸುಖಕ್ಕೆ ತಲೆ–ಬಾಗದೇ ದೂರಾಲೋಚನೆಯನ್ನಿಟ್ಟು, ಮುಂದಿನ ಜನಾಂಗಕ್ಕೂ ಬದುಕುವ ಅವಕಾಶ ಮಾಡಿಕೊಡುವಂತಹ ವ್ಯವಸ್ಥೆಯ ಬಗ್ಗೆ ಯಾಕೆ ಚಿಂತಿಸಬಾರದು? ಹಾಗಿದ್ದರೆ ಬನ್ನಿ ಪರಿಸ್ಥಿತಿಯನ್ನು ಅವಲೋಕಿಸೋಣ.

ಈ ಹಿಂದೆ ಬಾವಿ ನೀರು ಸೇದಿ ನೂರು ವರ್ಷ ಬಾಳಿದರು, ಸಿಗರೇಟು ಸೇದಿ, ಮದ್ಯ ಕುಡಿದು ಮಧ್ಯವಯಸ್ಸಿಗೆ ಸೀಮಿತವಾಗುತ್ತಿದ್ದಾರೆ ಈಗಿನ ಯುವ ಜನಾಂಗ. ಹೌದು! ಎತ್ತ ಸಾಗುತ್ತಿದ್ದಾರೆ ಇಂದಿನ ಯುವ ಜನತೆ ಎಂದು ಒಂದು ಕ್ಷಣ ಯೋಚಿಸಿ ನೋಡಿ. ಕ್ಷಣಿಕ ಸುಖಗಳಾದ ಅಧಿಕಾರ, ಹಣ, ಹೆಣ್ಣು, ಹೆಂಡ, ಮೋಜು–ಮಸ್ತಿಗಳಿಂದ ತಮ್ಮ ಅಮೂಲ್ಯ ಯೌವನದ ಜೀವನವನ್ನು ನಾಶ ಮಾಡಿಕೊಳ್ಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ ? ಟಿ.ವಿ ಪರದೆ ಮೇಲೆ ನೋಡಿಕೊಂಡು ನಾವೂ ಹೀಗೇಕಾಗಬಾರದು ಅನ್ನುವ ವಿಚಿತ್ರ ಯೋಚನಾಲಹರಿಯೇ ಸಾಕಷ್ಟು ಅನಾಹುತಗಳಿಗೆ ಕಾರಣವಾಗುತ್ತಿಲ್ಲವೇ?

ಪಾಶ್ಚಿಮಾತ್ಯ ಜೀವನದ ಸುಖ ಭೋಗಗಳಿಗೆ ಮಾರು ಹೋಗಿರುವ ಯುವಕರು ಬೇಗ ಶ್ರೀಮಂತರಾಗಲು ಬಯಸುತ್ತಿದ್ದಾರೆ. ಮೌಲ್ಯಾಧಾರಿತ ಜೀವನ ಇಂದು ಎಲ್ಲಿದೆ ಅಂತ ಹುಡುಕಬೇಕಿದೆ. ಗುರು ಹಿರಿಯರನ್ನು ಗೌರವಿಸುವ ಮೌಲ್ಯಯುತ ಬದುಕಿಗೆ ಶೈಕ್ಷಣಿಕ ಹಿನ್ನಡೆಯೇ ಸಾಕಷ್ಟು ಯುವಜನರ ಅಡ್ಡದಾರಿಗೆ ಕಾರಣವಾಗುತ್ತಿದೆ ಅಂತ ಅನ್ನಿಸುವುದಿಲ್ಲವೇ? ಯುವ ಜನತೆ ಐಷಾರಾಮಿ ಜೀವನಕ್ಕಾಗಿ ಯಾವುದೇ ಕೆಲಸ ಮಾಡಲು ಸಿದ್ಧರಾಗುತ್ತಿರುವುದು ವಿಪರ್ಯಾಸ. ಯಾವುದೇ ಕೆಲಸ ಎಂದರೆ ಕೊಲೆ, ಸುಲಿಗೆ, ದರೋಡೆ, ಕಳ್ಳತನ, ಮೋಸ, ವಂಚನೆಗಳಂತಹ ವಾಮಮಾರ್ಗಗಳಿಂದ ದುಡ್ಡು ಗಳಿಸಲು ಹಾತೊರೆಯುತ್ತಿರುವುದು ಇಂದಿನ ದುರಂತಗಳಲ್ಲೊಂದು.

ಭಾರತದಲ್ಲಿ ಓದು, ವಿದೇಶದಲ್ಲಿ ಕೆಲಸ ಇದು ಇಂದಿನ ಬುದ್ಧಿವಂತ ಯುವಕರ ಕನಸಾಗಿದೆ. ಅದನ್ನು ಕಾರ್ಯರೂಪಕ್ಕೆ ತರಲು ವಿದೇಶಗಳತ್ತ ತಾಕುತ್ತಿದ್ದಾರೆ. ಶ್ರೀಮಂತರಾದರೆ ತಮ್ಮ ಕನಸು ಈಡೇರದೇ ಹೋದಾಗ ಅತ್ತ ಮನೆಗೂ ಹೋಗದೇ, ಇತ್ತ ದೇಶಕ್ಕೂ ಬಾರದೇ ತ್ರಿಶಂಕುಗಳಾಗುತ್ತಿರುವುದನ್ನು ಕಾಣಬಹುದು. ಕೆಲವೊಮ್ಮೆ ಆತ್ಮಹತ್ಯೆಯಂತಹ ಹೇಡಿತನದ ಕೃತ್ಯಗಳಿಗೂ ಕೈಹಾಕಿದವರಿದ್ದಾರೆ. ದಿನದ ಹೆಚ್ಚು ಭಾಗ ಕಂಪ್ಯೂಟರ್, ಇಂಟರ್ನೆಟ್, ಮೊಬೈಲ್, ಬೈಕು, ಪಬ್ ಹಾಗೂ ಬಾರ್‌ಗಳಲ್ಲಿ ಕಾಲಕಳೆಯುವ ಯುವಜನತೆ ಭವಿಷ್ಯದ ಬಗ್ಗೆ ಕಿಂಚಿತ್ತೂ ಯೋಚಿಸುತ್ತಿಲ್ಲ. ಬದುಕಿಗೆ ಈ ಮೇಲಿನವೆಲ್ಲ ಅನಿವಾರ್ಯವಲ್ಲದಿದ್ದರೂ ಇಂದಿನ ಜೀವನ ಕ್ರಮ, ಬದಲಾಗುತ್ತಿರುವ ಜೀವನ ಪದ್ಧತಿಗೆ ಎಲ್ಲವೂ ಅನಿವಾರ್ಯ ಎನ್ನುವುದು ಯುವಕರ ವಾದವಾಗಿದೆ.

ಇಂದು ಎಲ್ಲ ಕ್ಷೇತ್ರಗಳಲ್ಲೂ ಕ್ಯಾನ್ಸರ್ ಹರಡಿದಂತೆ ಜೀವನ ಪದ್ಧತಿಯೂ ಕ್ಯಾನ್ಸರ್ ಥರ ಆಗುತ್ತಿದೆ. ಈ ಮೇಲಿನವೆಲ್ಲ ಅನಿವಾರ್ಯವಷ್ಟೇ ಅಲ್ಲ. ಇವಿಲ್ಲದೇ ಬದುಕು ನಶ್ವರ ಅಂತ ಯೋಚಿಸುವವರಿಗೇನು ಕಮ್ಮಿ ಇಲ್ಲ. ಇಂತಹ ಸೌಲಭ್ಯಗಳಿಗಾಗಿ ಹಣಸಿಗದಿದ್ದಾಗ ಹಣಕ್ಕಾಗಿ ಅಪರಾಧಗಳು ಹೆಚ್ಚಾಗುತ್ತಿವೆ. ಕೈಯಲ್ಲಿ ಉದ್ಯೋಗ ಇಲ್ಲ. ಖರ್ಚಿಗೆ ಕಾಸಿಲ್ಲ, ಬದುಕು ಅನಿಶ್ಚಿತತೆಯಿಂದ ಕೂಡಿದೆ. ಜೀವನವೇ ಮುಗಿಯಿತು ಎಂಬಂತೆ ವರ್ತಿಸುವ ಯುವಕರು, ಸಣ್ಣ ಸಮಸ್ಯೆ ಬಂದರೂ ಖಿನ್ನರಾಗುತ್ತಾರೆ.

ಇಂದು ಯುವಕರು ದೈಹಿಕ ಶ್ರಮದಿಂದ ವಿಮುಖರಾಗಿ ಎ.ಸಿ ರೂಮಿನಲ್ಲಿ ಕೆಲಸ ಮಾಡುವಂತಹ ಅಥವಾ ಜೀವಿಸುವ ಪರಿಯತ್ತ ಸಾಗುತ್ತಿದ್ದಾರೆ. ನಡಿಗೆ ಕಡಿಮೆಯಾಗಿ ದೈಹಿಕ ವ್ಯಾಯಾಮವಿಲ್ಲದೆ ವಾಹನಗಳಲ್ಲೇ ಓಡಾಟ, ಕಾಲಬುಡದಲ್ಲೇ ಸಿಗುವ ವ್ಯವಸ್ಥೆಗಳಿಂದಾಗಿ ಸೋಮಾರಿಗಳಾಗುತ್ತಿದ್ದಾರೆ. ಈ ಕಾರಣಗಳಿಂದಾಗಿಯೇ ನಾನಾ ಕಾಯಿಲೆಗಳು ವಕ್ಕರಿಸುತ್ತಿವೆ. ಬುದ್ಧಿವಂತಿಕೆಯೊಂದೇ ಜೀವನವಲ್ಲ. ದೈಹಿಕ ವ್ಯಾಯಾಮ ಕೂಡಾ ಯುವಕರ ಮನಸ್ಸನ್ನು ಮತ್ತು ಕಾರ್ಯ-ತತ್ಪರತೆಯನ್ನು ಉದ್ದೀಪನಗೊಳಿಸುತ್ತದೆ. ಬುದ್ಧಿವಂತಿಕೆ, ಜ್ಞಾನ, ಹಣ ಗಳಿಸಬಹುದು, ಶ್ರೀಮಂತರಾಗಬಹುದು ಆದರೆ ಆರೋಗ್ಯವನ್ನಲ್ಲ. ಆರೋಗ್ಯವೊಂದೇ ಆಯುಷ್ಯವನ್ನು ಹೆಚ್ಚಿಸಬಲ್ಲದು. ಪರಿಶ್ರಮದಲ್ಲಿ ಗಳಿಸಿದ ಸುಖ, ಐಷಾರಾಮದಲ್ಲಿ ಗಳಿಸಿದ ಸುಖದಲ್ಲಿ ಇರುವುದಿಲ್ಲ. ಇದು ವಾಸ್ತವಿಕ ಸತ್ಯ.

ಭವಿಷ್ಯದ ಭಾವೀ ನಾಯಕರು ಎಂದೆನಿಸಿಕೊಳ್ಳುವ ಯುವಜನತೆ ದೇಶಪ್ರೇಮ, ಆದರ್ಶ ಮೌಲ್ಯಗಳತ್ತ ಹೆಜ್ಜೆ ಹಾಕಬೇಕು. ವಯಸ್ಸು ಹೆಚ್ಚಾದಂತೆ ಜವಾಬ್ದಾರಿಗಳು ಹೆಚ್ಚುತ್ತವೆ. ಬದುಕಿನ ಹೆಜ್ಜೆ ಹೆಜ್ಜೆಗೂ ಸವಾಲುಗಳು ಎದುರಾಗುತ್ತವೆ. ಎಲ್ಲವನ್ನೂ ಸಹನೆಯಿಂದ ಎದುರಿಸಬೇಕು. ಈ ಮೂಲಕ ಹೆತ್ತವರಿಗೆ, ದೇಶಕ್ಕೆ ಏನನ್ನಾದರೂ ನೀಡಿ ಜೀವನ ಸಾರ್ಥಕ ಮಾಡಿಕೊಳ್ಳಬೇಕು. ನಿಲ್ಲಿ ಯುವಕರೇ, ಬಿಸಿಲ ಕುದುರೆ ಏರಿ ಬೆಳದಿಂಗಳ ಬಾಲೆಯ ಹಿಂದೆ ಓಡದಿರಿ. ಕ್ಷಣಿಕ ಸುಖಕ್ಕೆ ಭೌತಿಕ ಸುಖವನ್ನು ಹಾಳುಮಾಡಿಕೊಳ್ಳಬೇಡಿ. ಒಂದೇ ಒಂದು ಸಲ ಹಿಂದೆ ತಿರುಗಿ ಮುಂದೆ ಸಾಗಿ, ನಮ್ಮ ಸಂಸ್ಕೃತಿ, ಸಾಹಿತ್ಯ, ಇತಿಹಾಸ, ಪೂರ್ವಜರು ಎಲ್ಲವೂ ನಮ್ಮ ಸಾಧನೆಗೆ ದಾರಿದೀಪ ಎನ್ನುವುದನ್ನು ಮರೆಯಬಾರದು. ಹುಚ್ಚು ಮನಸ್ಸಿನ ಹತ್ತು ಮುಖಗಳು ಆಗಾಗ ಜೀವನದಲ್ಲಿ ವಿಚಿತ್ರ ವಿಚಾರಗಳು ನಮ್ಮ ಮನಸ್ಸಿನಲ್ಲಿ ಕಾಡುವುದು ಸಹಜ ಅಲ್ವೇ? ಆದರೆ ಅದಕ್ಕೆ ಕಟ್ಟುಪಾಡು ಅನ್ನುವ ಪರಿಧಿಯಲ್ಲಿ ನಿಯಂತ್ರಿಸುವುದು ಸೂಕ್ತ ಅಲ್ವೇ?

ಭವ್ಯ ಭವಿಷ್ಯತ್ತು ಯಾರ ಆಸ್ತಿಯೂ ಅಲ್ಲ, ಸ್ವತ್ತೂ ಅಲ್ಲ, ಎಲ್ಲ ನಮ್ಮ ನಮ್ಮ ಅನುಭವ, ನಡೆ, ನುಡಿ ಜ್ಞಾನ, ಆಚಾರ-ವಿಚಾರಗಳ ಮೇಲೆ ಅವಲಂಬಿತವಾಗುತ್ತದೆ ಅನ್ನುವುದು ಬಲ್ಲಿದರ ವಿಚಾರ. ಒಂದೇ ಬಾರಿಗೆ ಅಟ್ಟಕ್ಕೆ ಏರಬೇಕು. ಆಕಾಶಕ್ಕೆ ಹಾರಬೇಕು, ಸಮುದ್ರದಲ್ಲಿ ಈಜಬೇಕು, ಪರ್ವತ ಏರಬೇಕು ಅನ್ನುವುದು ಮನುಷ್ಯನ ಸಹಜ ಆಕಾಂಕ್ಷೆಯಾದರೂ ಅದಕ್ಕೆ ಸಹನೆ, ತಾಳ್ಮೆ, ಧೈರ್ಯ, ಸಮಯಾವಕಾಶಕ್ಕಾಗಿ ಕಾಯಬೇಕಾಗುತ್ತದೆ. ಯಾವುದಕ್ಕೂ ಧೈರ್ಯ, ಅನುಭವ ನಮಗೆ ಪಾಠ ಹೇಳುತ್ತದೆ ಅನ್ನುವುದು ಸತ್ಯ. ಹಂತ ಹಂತವಾಗಿ


ಹೆಜ್ಜೆಯನ್ನಿಟ್ಟು ಮೇಲೇರಬೇಕಲ್ಲದೇ ಒಂದೇ ಬಾರಿಗೆ ಅಟ್ಟಕ್ಕೆ ಕಾಲಿಟ್ಟರೆ ಅನಾಹುತವಾಗುವುದೇ ಹೆಚ್ಚು. ಹಣವೊಂದಿದ್ದರೆ ಎಲ್ಲವುದನ್ನೂ ಸಾಧಿಸಲು ಸಾಧ್ಯವಿಲ್ಲ. ಗೌರವ, ಗುಣ, ಮೌಲ್ಯ, ತಮ್ಮ ನಡತೆಯಲ್ಲಿ ಅಳೆಯಲ್ಪಡುತ್ತದೆ ಅನ್ನುವುದು ಸಹಜವಾದರೂ, ಪ್ರಾಯಕ್ಕೆ ತಕ್ಕ ಬೆಲೆ ಕೂಡಾ ಪಡೆಯುವುದು ಅಥವಾ ನೀಡುವುದು ಸಾರ್ವಜನಿಕ ಬದುಕಿನ ಅನಿವಾರ್ಯತೆಯೂ ಹೌದು.

ಬದುಕಿನ ಸಾರ್ಥಕತೆಯನ್ನು ಮಾನವೀಯ ಮೌಲ್ಯಗಳ ಪ್ರತಿಪಾದನೆ ಮತ್ತು ಅಚಲ ವಿಶ್ವಾಸದಿಂದ ಕಾಣಬೇಕು. ಬದುಕು ಹರಿಯುವ ನೀರಿನಂತಿರಬೇಕೇ ಹೊರತು ನಿಂತ ನೀರಾಗಬಾರದು. ಹರಿಯುವ ನೀರಿಗೂ ಮಧ್ಯೆ ಅಡೆ ತಡೆಗಳಿದ್ದರೆ ತಾನೆ ಅದು ಶುಭ್ರವಾದಂತೆ. ಬದುಕು ಕೂಡಾ ಅನುಭವಗಳ ಮಂಟಪದ ಮೇಲೆ, ಮೌಲ್ಯಗಳ ಆಧಾರದ ಮೇಲೆ ಚಿತ್ರಿತವಾಗುತ್ತದಲ್ಲವೇ?

ಅಧಿಕಾರ, ಅಂತಸ್ತು ಅದಾಗಿಯೇ ಬರಬೇಕು. ಬಲವಂತವಾಗಿ ಪಡೆಯುವಂತಾಗಬಾರದು. ಬಲವಂತದಿಂದ ಪಡೆದರೆ ಅದಕ್ಕೆ ಧೀರ್ಘಾಯುಷ್ಯ–ವಿರುವುದಿಲ್ಲ. ಸಮಾಜದಲ್ಲಿ ಅದಕ್ಕೆ ಗೌರವ, ಬೆಲೆಯಿರುವುದಿಲ್ಲ. ಈ ಬಗ್ಗೆ ಆಗಾಗ ಚಿಂತನ–ಮಂಥನಗಳು ಸಮಾಜದ ಯುವ ಜನಾಂಗಕ್ಕೆ ತಿಳಿಯುವ ರೀತಿಯಲ್ಲಿ ಕಾರ್ಯಕಲಾಪ ಆಗುತ್ತಿರುವಂತೆ ಮತ್ತು ಸಮಾಜದ ಒಳಿತು ಕೆಡುಕುಗಳು ಇಂದಿನ ಆಧುನಿಕ ಸಮಾಜದಲ್ಲಿ ಯುವ ಜನತೆಗೆ ಮೌಲ್ಯಯುತವಾಗಿ ತಿಳಿಹೇಳುವುದು ಹಿರಿಯರ ಜವಾಬ್ದಾರಿ ಕೂಡಾ ಆಗಿರುತ್ತದೆ. ಈ ನಿಟ್ಟಿನಲ್ಲಿ ಮುಂದಾದರೂ ನಾವು ಯೋಚಿಸೋಣವೇ? ಐಷಾರಾಮಿ ಜೀವನ ಪ್ರಾಕೃತಿಕ ವಿಕೋಪದ ಹೊಡೆತಕ್ಕೆ ನಲುಗಿ ಕೇರಳ, ಕೊಡಗು ಮತ್ತು ಕರ್ನಾಟಕದ ಕರಾವಳಿ ಭಾಗದಲ್ಲಿ ಏನಾಗಿದೆ ಅನ್ನುವುದು ಅನುಭವಿಸಿದವರಿಗೆ ತಿಳಿಯುತ್ತದೆ.

ಇಷ್ಟೇ ಮನುಷ್ಯ ಸ್ಥಿತಿ. ಪ್ರಕೃತಿ ಒಂದಿಷ್ಟೂ ಮುನಿಸಿಕೊಂಡಿದ್ದಷ್ಟೇ. ಮನುಷ್ಯರ ಎಲ್ಲ ಅಹಂಕಾರ, ಕೋಪ, ಸಂಪತ್ತು, ಜಾತಿ, ಅಸೂಯೆ, ಅಂತಸ್ತು ಮಳೆಯಲ್ಲಿ ಕೊಚ್ಚಿ ಹೋಯಿತು. ನಾವು ಎಷ್ಟೇ ಮುಂದುವರಿದಿದ್ದರೂ ಪ್ರಕೃತಿಯ ಎದುರು ನಾವು ಸೊನ್ನೆ. ನಿನ್ನೆ ಮೊನ್ನೆಯವರೆಗೆ ಮೆತ್ತನೆಯ ಹಾಸಿಗೆಯಲ್ಲಿ ಎ.ಸಿ ಹಾಕಿ ಮನೆಯಲ್ಲಿ ಮಲಗಿದವರೂ, ಸೋರುವ ಮನೆಯಲ್ಲಿ, ಇಳಿಜಾರು ಬೆಟ್ಟದಲ್ಲಿ ಭೂಮಿಯೇ ಹಾಸಿಗೆ, ಆಕಾಶವೇ ಹೊದಿಕೆ ಮಾಡಿಕೊಂಡವರೂ ಇಲ್ಲಿ ಎಲ್ಲರೂ ಸರಿಸಮಾನರಾದರು. ಇಲ್ಲಿಯವರೆಗೆ ಗಲಾಟೆ, ಜಗಳ ಮಾಡಿದವರು, ಅಹಂಕಾರದ ದಿರಿಸು ತೊಟ್ಟವರು, ಮೆರೆದವರು, ಪರಸ್ಪರ ಮುಖ ನೋಡಿ ನಗಲು ಹಿಂದೇಟು ಹಾಕಿದವರು ಇಂದು ಒಂದೇ ಸೂರಿನಡಿಯಲ್ಲಿ ಒಂದೇ ತಟ್ಟೆಯಲ್ಲಿ ಊಟ ಮಾಡುವ ಪರಿಸ್ಥಿತಿ ಬಂದದ್ದು ಹೇಗೆ? ಯಾರಿಂದ, ಯಾಕಾಗಿ? ಅತ್ಯಾಚಾರ, ಅನಾಚಾರದ ಪರಮಾವಧಿಯೇ ಅಂತ್ಯದ ಕಾಲಕ್ಕೆ ಮೇಳೈಸುತ್ತವೆ ಅನ್ನುವುದಕ್ಕೆ ಕಾಲವೇ ಮುನಿಸಿ ಶಿಕ್ಷೆ ನೀಡಿದಂತಾಗಿದೆ. ನಿರಾಶ್ರಿತರ ಶಿಬಿರವೇ ಇಂದು ಸರ್ವಧರ್ಮ ಸಮ್ಮೇಳನದ ವೇದಿಕೆಯಾಗಿ ಪ್ರಕೃತಿಯೇ ನಿರ್ಮಿಸಿದ ಕೋಟೆಯಂತಾಗಿದೆ. ಎಲ್ಲಿಯ ಧರ್ಮ, ಎಲ್ಲಿಯ ಜಾತಿ, ಮೈಮುಟ್ಟಿ ನೋಡಬೇಕಲ್ಲವೇ? ಮುಕ್ಕೋಟಿ ದೇವತೆಗಳಿಗೆ ಸಮಾನಾದ ಗೋವಿನ ನಾಶಕ್ಕೆ ಪ್ರಕೃತಿಯೇ ಮುನಿದಳು ಅನ್ನುವ ಮಾತು ಮತ್ತು ಶಬರಿಮಲೆ ದೇವಸ್ಥಾನಕ್ಕೆ ಮುಟ್ಟಾಗುವ ಹೆಂಗಸರಿಗೂ ಪ್ರವೇಶ ನೀಡುವ ಅನುಮತಿ ಇವೆಲ್ಲಾ ನಂಬಿಕೆ, ವಿಶ್ವಾಸ, ದೈವತ್ವಕ್ಕೆ ಒಡ್ಡಿದ ಸವಾಲಾಗಿ ಪ್ರಕೃತಿಯೇ ಮುನಿಯಿತು ಅನ್ನುವುದು ಸಾರ್ವತ್ರಿಕ ಸತ್ಯವಾಗಿ ಯಾಕೆ ನಾವು ಪರಿಗಣಿಸಬಾರದು? ಕೆಲವೊಂದು ವಿಚಾರಗಳಿಗೆ ಕಾನೂನು ನಿರ್ದೇಶನ ನೀಡುವುದು ಎಷ್ಟರಮಟ್ಟಿಗೆ ಸರಿ ಅನ್ನುವುದು ಚರ್ಚಿಸಬೇಕಾದ ವಿಷಯ. ಧಾರ್ಮಿಕ, ನಂಬಿಕೆ, ಆಚಾರ–ವಿಚಾರಗಳು ತಲೆ–ತಲಾಂತರಗಳಿಂದ ನಮ್ಮ ಪೂರ್ವಿಕರು ಸುಮ್ಮನೆ ಮಾಡಲಿಲ್ಲ. ಅದಕ್ಕೊಂದು ಆಧಾರವಿರುತ್ತದೆ. ಅದಕ್ಕೆ ತಡೆಯೊಡ್ಡಿದರೆ ಏನಾಗುತ್ತದೆ ಅನ್ನುವುದು ವಸ್ತುಸ್ಥಿತಿ ಹೇಳುತ್ತದೆ ಅಲ್ವೇ? ಪ್ರಾಕೃತಿಕ ಸಂಪತ್ತನ್ನು ದಯವಿಟ್ಟು ಹಾಳುಮಾಡಬೇಡಿ. ಮುಂದಿನ ಜನಾಂಗಕ್ಕಾದರೂ ಸ್ವಾರ್ಥ, ದುರಾಸೆ, ವ್ಯಾಮೋಹ ಬಿಟ್ಟು ಬಿಡುವುದು ಸೂಕ್ತ ಅಲ್ವೇ?

# ಬದುಕಿನ ಆದರ್ಶ 'ಅಪ್ಪ'



ಪ್ರದೀಪ ಶೆಟ್ಟಿ ಬೇಳೂರು

ಅಪ್ಪಂದಿರ ದಿನದ ಆಚರಣೆಯ ಹೊತ್ತಿನಲ್ಲಿ ನಾವು ನೀವೆಲ್ಲರೂ ನಮ್ಮ ನಮ್ಮ ತಂದೆ ನಮ್ಮೆಲ್ಲರ ಬದುಕಿನಲ್ಲಿ ಎಷ್ಟು ಪ್ರಭಾವ ಬೀರಿದ್ದಾರೆ ಎನ್ನುವುದನ್ನು ನೆನಪಿಸಿಕೊಳ್ಳುವುದು ಉತ್ತಮ. ಈ ಜಗತ್ತಿನಲ್ಲಿ ಒಂದು ಮಗುವಿನ ಜೀವನದುದ್ದಕ್ಕೂ ತಾಯಿಯ ಪಾತ್ರವನ್ನು ಎಲ್ಲರೂ, ಎಲ್ಲ ಕಡೆಯಲ್ಲೂ ಉಲ್ಲೇಖಿಸುತ್ತಾರೆ. ಆದರೆ ಅಪ್ಪ ನಮ್ಮ ಬೆಳವಣಿಗೆಗೆ ಮಾಡಿದ ತ್ಯಾಗ, ಅನುಭವಿಸಿದ ನೋವು ಅವಮಾನ, ಎದುರಿಸಿದ ತೊಂದರೆ ಗುರುತಿಸುವುದು ಕಡಿಮೆಯೇ ಅನ್ನಬಹುದು. ಅಮ್ಮ ಪ್ರೀತಿ ಜಾಸ್ತಿ ತೋರಿ, ಕೋಪ ಕಡಿಮೆ ತೋರಿಸಿದರೆ, ಅಪ್ಪ ನಮ್ಮ ಬದುಕಿನಲ್ಲಿ ಬಹುವೇಳೆ ಕಠಿಣವಾಗಿ ವರ್ತಿಸುತ್ತಾರೆ. ಹಾಗೆಂದ ಕೂಡಲೆ ಅವರಿಗೆ ನಮ್ಮ ಮೇಲೆ ವಾತ್ಸಲ್ಯವಿಲ್ಲವೆಂದಲ್ಲ, ಅದು ಕೇವಲ ನಮಗೆ ಬೆಳವಣಿಗೆಯ ಹಂತದಲ್ಲಿ ಜೀವನದ ಬಗ್ಗೆ ಅರಿವಾಗಲೆಂದು ಅವರು ಅನುಸರಿಸುವ ರೀತಿಯಷ್ಟೆ. ಎಷ್ಟೊಂದು ಬಾರಿ ಮಕ್ಕಳಾಗಿ ನಾವು ಅಪ್ಪನನ್ನು ಅರ್ಥೈಸಿಕೊಳ್ಳುವಲ್ಲಿ ಎಡವಿದ್ದೇವೆಯೇ ಅಂತ ಈವಾಗ ಅನ್ನಿಸುವುದುಂಟು.

ಅದೆಷ್ಟೇ ಹಣಕಾಸಿನ ತೊಂದರೆ, ಮನೆ ನಡೆಸುವಲ್ಲಿ ಎದುರಾಗುವ ಸವಾಲುಗಳಿದ್ದರೂ ಅಪ್ಪ ಯಾವತ್ತೂ ಮಕ್ಕಳೆದುರು ತೋರಿಸಿಕೊಳ್ಳಲು ಇಚ್ಛಿಸುವುದಿಲ್ಲ ಏಕೆಂದರೆ ಮಕ್ಕಳಾದ ನಮ್ಮ ಮುಖದಲ್ಲಿ ಇರುವ ಖುಷಿ ಮಾಸಬಾರದೆಂದು. ನಮ್ಮ ವಿದ್ಯಾಭ್ಯಾಸಕ್ಕೆ ಯಾವುದೇ ಅಡಚಣೆ ಆಗಬಾರದೆಂದು ಮನೆಯಿಂದ ನೂರಾರು, ಸಾವಿರಾರು ಮೈಲಿ ದೂರದ ಊರಿನಲ್ಲಿ ಹಗಲು ರಾತ್ರಿಯೆನ್ನದೇ ಬೆವರು ಹರಿಸಿ ಸಂಪಾದಿಸಿದ ಹಣವನ್ನು ಅವರ ಸ್ವಂತಕ್ಕೆ ಉಪಯೋಗಿಸಿಕೊಳ್ಳದೇ ನಮಗೆ, ನಮ್ಮ ಭವಿಷ್ಯಕ್ಕಾಗಿ ಕೂಡಿಡುವುದು. ಅಮ್ಮನ ಪ್ರೀತಿ, ಸೇವೆ ಎಷ್ಟು ನಿಸ್ವಾರ್ಥವೋ ಹಾಗೆ ಅಪ್ಪ ತೋರುವ ಕಾಳಜಿ, ಪ್ರೀತಿ ಅಷ್ಟೇ ಸ್ವಾರ್ಥರಹಿತವಾದದ್ದು ಎಂದರೆ ತಪ್ಪಾಗಲಾರದು.

ಬಹುಶಃ ಅಪ್ಪ ಅವರ ಅರ್ಧ ಆಯಸ್ಸನ್ನು ಮಕ್ಕಳು, ಸಂಸಾರಕ್ಕೆ ಮುಡಿಪಾಗಿಟ್ಟು, ಶಕ್ತಿಗುಂದುವವರೆಗೆ ಮಕ್ಕಳಾದ ನಮ್ಮಿಂದ ಏನನ್ನೂ ಬಯಸದೆ ನಮಗೆ ಏನಾದರೂ ಸಹಕಾರ ನೀಡುವುದರ ಕಡೆಗೆ ಪ್ರತಿ ನಿತ್ಯ ಆಲೋಚಿಸುವರು. ಇಂದು ನಾವು ಏನಾಗಿದ್ದೇವೆಯೋ ಅದು ನಮ್ಮ ಹೆತ್ತವರು ಕೊಟ್ಟ ಭಿಕ್ಷೆಯೇ ಹೊರತು ನಮ್ಮ ಸ್ವಂತದ್ದಲ್ಲ. ಅಪ್ಪನ ಜೀವನದ ವಿದ್ಯೆಯ ಎದುರು ನಮ್ಮ ಪದವಿಗಳು ಒಂದು ಮೆಟ್ಟಿಲು ಕೆಳಗೆ ಇರುವುದೆನ್ನುವುದನ್ನು ಸೂಕ್ಷ್ಮವಾಗಿ ಅರಿತರೆ ನಮ್ಮ ಬದುಕು ಸುಗಮವಾಗಿ ಸಾಗಬಹುದು. ಹಾಗಾಗಿ ಅಪ್ಪನನ್ನು ನೆನೆಯಲು ಒಂದು ದಿನದ ಸಂಭ್ರಮವನ್ನು ಮೀಸಲಾಗಿಡದೆ, ಅವರ ಇಳಿ ವಯಸ್ಸಿನಲ್ಲಿ, ನಮ್ಮ ಬಾಲ್ಯದಲ್ಲಿ ಅವರು ನಮ್ಮ ಬಗೆಗೆ ತೋರಿದ ಪ್ರೀತಿ ಕಾಳಜಿಯಲ್ಲಿ ಒಂದು ಸಾಸಿವೆ-ಕಾಳಷ್ಟಾದರೂ ಪ್ರೀತಿ, ಕಾಳಜಿ ತೋರಿಸಿ ಅವರ ಸೇವೆ ಮಾಡಿದ್ದೇ ಆದರೆ ಅದಕ್ಕಿಂತ ಸಾರ್ಥಕ ಜೀವನ ನಮ್ಮದು ಮತ್ತು ನಮ್ಮನ್ನು ಸಲಹಿದ ಹೆತ್ತವರಿಗೂ ಮತ್ತೊಂದಿಲ್ಲ.

## ಸಂಬಂಧಗಳು

ಇಂದಿನ ಆಧುನಿಕ ಯುಗದಲ್ಲಿ ಸಂಬಂಧಗಳು ಅವುಗಳ ಮೌಲ್ಯವನ್ನು ಎಷ್ಟರ-ಮಟ್ಟಿಗೆ ಉಳಿಸಿಕೊಂಡಿವೆ ಎಂಬುದನ್ನು ಅವಲೋಕನ ಮಾಡಬೇಕಾದ ಅವಶ್ಯಕತೆ ಇದೆ ಅಂದರೂ ತಪ್ಪಾಗುವುದಿಲ್ಲ. ಹುಟ್ಟಿದ ಮಗುವಿಗೆ 'ಅಮ್ಮ' ಎನ್ನುವ ಪದದ ಬದಲು 'ಮಮ್ಮಿ' ಎನ್ನುವ ಪದ ಬಳಕೆಯಿಂದ ಹಿಡಿದು, ಹಿರಿಯರು, ಕಿರಿಯರಿಗೆ 'ಅಂಕಲ್' 'ಆಂಟಿ' ಎಂಬುದರವರೆಗೆ ಸಂಬಂಧಗಳ ಪಾಠವನ್ನು ಇಂದಿನ ಪೀಳಿಗೆಗೆ ಮಾಡುತ್ತಿದ್ದೇವೆ. ಅದೊಂದು ಕಾಲ ಘಟ್ಟದಲ್ಲಿ ಮಗುವಿನ ಬೆಳವಣಿಗೆಯಲ್ಲಿ ಅಜ್ಜ ಅಜ್ಜಿಯ ಪಾತ್ರ ಪ್ರಮುಖವೆನಿಸುತ್ತಿತ್ತು. ಅಜ್ಜ, ಅಜ್ಜಿ ಪ್ರೀತಿ ನೀಡುವುದರ ಜೊತೆ ಜೊತೆಗೆ ಹೇಳುತ್ತಿದ್ದ ಕಥೆಗಳು ಎಷ್ಟೋ ಮಕ್ಕಳ ಭವಿಷ್ಯಕ್ಕೆ ದಾರಿದೀಪವಾಗಿದ್ದುಂಟು.

ಆದರೆ ಇಂದು ಪೋಷಕರು ಮಕ್ಕಳ ಮುಂದಿನ ಭವಿಷ್ಯ ಚೆನ್ನಾಗಿರಲೆಂದು ಇಂದಿನ ಬೆಳವಣಿಗೆಯ ಹಂತದಲ್ಲಿ ಸಿಗಬೇಕಾದ ಪ್ರೀತಿ, ಸಂಸ್ಕಾರ ಯಾವುದನ್ನೂ ಸರಿಯಾದ ರೀತಿಯಲ್ಲಿ ನೀಡದೆ, ಮಕ್ಕಳ ಆರೈಕೆಗೆ ಕೆಲಸದವರನ್ನೋ ಅಥವಾ ಮಕ್ಕಳನ್ನು ನೋಡಿಕೊಳ್ಳುವ ವ್ಯಾಪಾರಿ ಸಂಸ್ಥೆಯಲ್ಲೋ ಇರಿಸುತ್ತಿದ್ದಾರೆ.

ಯಾಂತ್ರಿಕತೆಯ ಈ ಯುಗದಲ್ಲಿ ನಾವು ಮಕ್ಕಳಿಗೆ ನೀಡುವ ಪ್ರೀತಿ, ತೋರುವ ಕಾಳಜಿಯು ಕೂಡ ಕೃತಕವಾಗತೊಡಗುತ್ತಿದೆಯೇ ಎಂಬ ಸಂಶಯ ಬಂದರೂ ಆಶ್ಚರ್ಯವೇನಿಲ್ಲ. ಮಗು ಹೆತ್ತವರನ್ನು ವಾರಾಂತ್ಯದ ರಜಾ ದಿನಗಳಲ್ಲಿ ನೋಡುವ ಪರಿಸ್ಥಿತಿ ಬಂದೊದಗಿದೆ. ಇಂತಹ ವಿಚಾರಗಳು ಬೆಳೆಯುತ್ತಿರುವ ಮಗುವಿನ ಮನಸ್ಸಿನ ಮೇಲೆ ಪ್ರಭಾವ ಬೀರುವುದರಲ್ಲಿ ಎರಡು ಮಾತಿಲ್ಲ. ಹಣದ ಮೂಲಕ ವಸ್ತುಗಳನ್ನು ಕೊಳ್ಳಬಹುದೆ ಹೊರತು ಮಕ್ಕಳ ಪ್ರೀತಿಯನ್ನಲ್ಲ.

ಇಂದಿನ ವಿಭಕ್ತ ಕುಟುಂಬದಲ್ಲಿ ಅಜ್ಜ, ಅಜ್ಜಿ, ಚಿಕ್ಕಮ್ಮ, ದೊಡ್ಡಮ್ಮ ಹೀಗೆ ಹಲವಾರು ಸಂಬಂಧಗಳ ನಡುವೆ ಇರುವ ಬಾಂಧವ್ಯವನ್ನು ಸಂಬಂಧದ ಹೆಸರುಗಳಲ್ಲೇ ಮಕ್ಕಳಿಗೆ ತಿಳಿಸುವಂತಾಗಿರುವುದು ವಿಷಾದನೀಯ. ಈಗ ಸುಲಭವೆನಿಸಿದರು ಮುಂದೊಂದು ದಿನ ಬೆಲೆ ತೆರಬೇಕಾಗುವ ಕ್ಷಣಗಳು ಬಂದರೂ ಬರಬಹುದು. ಹಾಗಾಗಿ ಸಂಬಂಧಗಳ ಮಹತ್ವವನ್ನು ಮಕ್ಕಳು ಬೆಳೆಯುವ ಹಂತದಲ್ಲಿ ತಿಳಿ ಹೇಳುವುದರಿಂದ ಭವಿಷ್ಯವನ್ನು ಒಂದೊಳ್ಳೆ ಮಾರ್ಗದಲ್ಲಿ ಹೋಗುವ ಹಾಗೆ ಪೋಷಕರಾಗಿ ನಾವು ನೋಡಿಕೊಳ್ಳಬಹುದೆಂಬುದೆ ಈ ಲೇಖನದ ಆಶಯ.

## ಯಶಸ್ಸು

ಇಂದಿನ ದಿನಮಾನದಲ್ಲಿ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯೂ ಬದುಕಿನಲ್ಲಿ ಯಶಸ್ವಿಯಾಗಬೇಕೆಂಬ ಹಂಬಲದೊಂದಿಗೆ ಜೀವನ ನಡೆಸುತ್ತಾನೆ. ಆದರೆ ಯಶಸ್ಸೆಂದರೆ ಏನು, ಯಾವ ರೀತಿಯ ಯಶಸ್ಸು ನಮ್ಮ ಜೀವನದಲ್ಲಿ ನೆಮ್ಮದಿಯ ಗಾಳಿಯನ್ನು ಬೀಸಬಲ್ಲದು ಎಂಬುದನ್ನು ಅರಿಯುವಲ್ಲಿ ನಾವು ಎಡವುತ್ತಿದ್ದೇವೇನೋ ಎಂಬ ಅನಿಸಿಕೆ ನನ್ನದು. ಈ ವರ್ತಮಾನದ ಸಂದರ್ಭದಲ್ಲಿ ಮಗು ಹುಟ್ಟಿದ ಘಳಿಗೆಯಿಂದ ಯಶಸ್ಸಿಗಾಗಿ ಪೋಷಕರು ಆ ಮಗುವಿನ ಬಾಲ್ಯದ ದಿನಗಳಲ್ಲೇ ಮಗುವಿನ ಮನಸ್ಸಿನಲ್ಲಿ ಒತ್ತಡವನ್ನು ಸೃಷ್ಟಿ ಮಾಡುತ್ತಿದ್ದಾರೆ. ಒಳ್ಳೆಯ ಶಿಕ್ಷಣ ಪಡೆದು ಸಮಾಜದ ಸ್ವಾಸ್ಥ್ಯ ಕಾಪಾಡುವಂತಹ ಮಾನವೀಯ ಗುಣಗಳನ್ನು ವೃದ್ಧಿಸಿಕೊಂಡು, ತಾನು ಮಾಡುವ ವೃತ್ತಿಯಲ್ಲಿ ನಿಷ್ಠೆಯಿಂದ ಇದ್ದು, ಅವನನ್ನು ನಂಬಿರುವ ಮನಸ್ಸುಗಳಿಗೆ ಬೆನ್ನೆಲುಬಾಗಿ, ಸಾರ್ಥಕತೆಯ ಬದುಕು ನಡೆಸಿದರೆ ಅದು ನಿಜವಾದ ಯಶಸ್ಸಲ್ಲವೆ? ಬದುಕಿನುದ್ದಕ್ಕೂ ಹಣದ ಗಳಿಕೆಯ ಹಿಂದೆ ಓಡುತ್ತಾ ಸಂಬಂಧಗಳ ಮಹತ್ವವನ್ನೇ ಅರಿಯದೆ, ನೀಡಬೇಕಾದ ಗೌರವ ನೀಡದೆಯೂ ಸಮಾಜದಲ್ಲಿ ಜನಪ್ರಿಯ ವ್ಯಕ್ತಿ ಅನ್ನಿಸಿಕೊಂಡರೆ ಅದನ್ನು ಯಶಸ್ಸೆಂದು ಪರಿಗಣಿಸಬಹುದೆ? ಹಾಗಾದರೆ ಯಶಸ್ಸಿನ ವ್ಯಾಖ್ಯಾನವೇನು? 'ಯಾವ ತರಹದ ಬದುಕು ನಡೆಸಿದರೆ ಯಶಸ್ವೀ ಜೀವನವೆನಿಸುವುದು' ಎಂಬುವುದರ ಬಗ್ಗೆ ವಿಶ್ಲೇಷಣೆ ಮಾಡಬೇಕಾದ ಅಗತ್ಯತೆ ಇದೆ. ಇಂದು ದೃಶ್ಯ ಮಾಧ್ಯಮದಲ್ಲಿ ಕಾಣ ಸಿಗುವ ಮುಖಗಳನ್ನು ಯಶಸ್ವೀ ವ್ಯಕ್ತಿಗಳೆಂದು ನೋಡುವುದರಿಂದ, ಪ್ರತಿಯೊಬ್ಬರೂ 'ತಾನು ಕೂಡಾ ಪರದೆ ಮೇಲೆ ಬಂದರೆ ಯಶಸ್ವಿಯಾದಂತೆ' ಎನ್ನುವ ಭ್ರಮೆಯಲ್ಲಿ ಬದುಕುತ್ತಿದ್ದೇವೆ. ಇಂತಹ ಬೆಳವಣಿಗೆಗಳು ಸದ್ಯಕ್ಕೆ ಯಾವುದೇ ತರಹದ ತೊಂದರೆ ಉಂಟು ಮಾಡದಿದ್ದರೂ ಭವಿಷ್ಯದಲ್ಲಿ ಬರುವ ಪೀಳಿಗೆಯ ಮೇಲೆ ಅತಿಯಾದ ಒತ್ತಡವನ್ನು ಹೇರಿದರೂ ಆಶ್ಚರ್ಯವಿಲ್ಲ. ಹಾಗಾಗಿ ಯಶಸ್ಸು ಎಂಬ ಮೂರೇ ಮೂರು ಅಕ್ಷರಕ್ಕೆ ಅತಿಯಾದ ಪ್ರಾಮುಖ್ಯತೆ ಕೊಟ್ಟು, ಪ್ರತಿಘಳಿಗೆಯೂ ಒತ್ತಡದ ಬದುಕನ್ನು ನಡೆಸದೆ, ನಮ್ಮಲ್ಲಿರುವ ಪ್ರತಿಭೆಗೆ ತಕ್ಕಂತೆ ಫಲಾಪೇಕ್ಷೆಯಿಲ್ಲದೇ ನಮ್ಮ ಕೆಲಸ ನಾವು ಮಾಡಿದ್ದೇ ಆದಲ್ಲಿ, ಬದುಕು ಸುಂದರವಾಗಿಯೂ ಸಂತೃಪ್ತವಾಗಿಯೂ ಇರುವುದು ಎಂಬುವುದೇ ಈ ಲೇಖನದ ಆಶಯ.

# ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು

ಹಬ್ಬಗಳು, ಆಚರಣೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು – ಕೃಷಿ ಪ್ರಧಾನವಾದ ಬಂಟ ಸಮಾಜದ ಎಲ್ಲಾ ಆಚರಣೆಗಳೂ, ಹಬ್ಬಗಳೂ ಕೃಷಿಗೆ ಸಂಬಂಧಪಟ್ಟವುಗಳೇ ಆಗಿವೆ. ಹಿಂದೆ ಕೂಡು ಕುಟುಂಬಗಳಿದ್ದ ಕಾಲದಲ್ಲಿ ಅತ್ಯಂತ ಸಾಂಪ್ರದಾಯಿಕವಾಗಿ ಆಚರಿಸಲ್ಪಡುತ್ತಿದ್ದ ಹಬ್ಬಗಳ ಸಡಗರ, ಸಂಭ್ರಮ ಕ್ರಮೇಣ ಕ್ಷೀಣಿಸುತ್ತಿದ್ದು ಕೃಷಿಯಂತೆಯೇ ಮರೆಯಾಗುತ್ತಿದೆಯೇನೋ ಎನ್ನುವ ಆತಂಕವಿದೆ. ಹಿರಿಯರಿಗೆ ಗತವೈಭವವನ್ನು ನೆನಪಿಸಿಕೊಳ್ಳಲು ಮತ್ತು ನವಪೀಳಿಗೆಗೆ ನಮ್ಮ ಆಚರಣೆಗಳ ವೈಶಿಷ್ಟ್ಯದ ಸೊಬಗನ್ನು ಮನದಟ್ಟು ಮಾಡುವುದಕ್ಕಾಗಿ ಈ ಅಂಕಣ. ಪ್ರಾದೇಶಿಕ ಹಾಗೂ ಭಾಷಿಕ ಭಿನ್ನತೆಗಳು ಆಚರಣೆಗಳಲ್ಲೂ ಪ್ರತಿಫಲಿಸುತ್ತವಾದ್ದರಿಂದ ಇಲ್ಲಿ ತುಳುನಾಡಿನ ದಕ್ಷಿಣ ಹಾಗೂ ಉತ್ತರ ಭಾಗಗಳ ಸಂಪ್ರದಾಯಗಳನ್ನು ಬೇರೆ ಬೇರೆಯಾಗಿ ಚಿತ್ರಿಸಲಾಗಿದೆ.



ನಿರ್ಮಲ ಸಿ. ರೈ.

**ಹೊಸ್ತ್ :** ಅಥವಾ ಕದಿರು ಕಟ್ಟುವ ಹಬ್ಬ – ಮೂಲತಃ ಕೃಷಿಕರಾದ ಬಂಟರಿಗೆ ಇದು ಒಂದು ಅರ್ಥಪೂರ್ಣವಾದ ಹಬ್ಬ. ಮಳೆಗಾಲದ ನಂತರ ಮೊದಲ ಬೆಳೆ ಮನೆ ಒಳಗೆ ಬರುವ ಕಾಲ. ಭತ್ತದ ತೆನೆಯನ್ನು ಮೊದಲ ಬಾರಿ ಮನೆ ಒಳಗೆ ತರುವುದೆಂದರೆ ಮನೆ ತುಂಬಿಸುವುದು ಅಥವಾ ಹೊಲಿ ತುಂಬಿಸುವುದು ಎಂದು ಅರ್ಥ. ಒಟ್ಟಾರೆ ಇದು ಸಮೃದ್ಧಿಯ ಕಾಲ. ಈ ಹಬ್ಬವೇ ಕುಂದಗನ್ನಡದ "ಹೊಸ್ತು". ಹೆಚ್ಚಾಗಿ ನವರಾತ್ರಿಯ ಯಾವುದಾದರೊಂದು ದಿನ ಅಥವಾ ಭತ್ತದ ಪೈರು ಬೇಗನೆ ಬಲಿತಿದ್ದರೆ, ನವರಾತ್ರಿಯ ಮೊದಲೇ ಹೊಸ್ತನ್ನು ಆಚರಿಸುತ್ತಾರೆ. ಹೊಸ್ತಿನ ಮುಂಚಿನ ದಿನ ಸಂಜೆ ತುಳಸಿಕಟ್ಟೆಯ ಪಕ್ಕ ಅಂಗಳವನ್ನು ಸೆಗಣಿ ಸಾರಿಸಿ ಸ್ವಚ್ಛಗೊಳಿಸಿ 2 ಗೂಟವನ್ನು ಹುಗಿದು, ಅದರ ಮೇಲೆ ಅಡ್ಡಕ್ಕೆ ಒಂದು ಕೋಲನ್ನಿಟ್ಟು ಚಪ್ಪರದ ಹಾಗೆ ಮಾಡುತ್ತಾರೆ. ಹೊಸ್ತಿನ ದಿನ ಬೆಳಗಿನ ಜಾವ ಮನೆಯ ಯಜಮಾನ ಮಿಂದು–ಮಡಿಯುಟ್ಟು ಗದ್ದೆಯಿಂದ ಭತ್ತದ ತೆನೆಯನ್ನು ಕಿತ್ತು ತಂದು, ಆ ಕೋಲಿನ ಚಪ್ಪರದ (ಕದಿರು ಚಪ್ಪರ) ಮೇಲೆ ಇಡುತ್ತಾನೆ. ಹಿಂದೆ, ಹಿಂದುಳಿದ ವರ್ಗದ ಒಂದು ಸಮುದಾಯ ಈ ಕೆಲಸವನ್ನು ಮಾಡುವ ಪರಿಪಾಠವಿತ್ತು. ಸೂರ್ಯೋದಯದ ಸಮಯದಲ್ಲಿ ಮನೆಯ ಯಜಮಾನ ಅಥವಾ ಮಗ ತೆನೆಗೆ ದೀಪ–ಧೂಪದ ಆರತಿ ಮಾಡಿ, ಮುಳ್ಳು ಸೌತೆಕಾಯಿ ತುಂಡರಿಸಿ, ಶಂಖ ಜಾಗಂಟೆಗಳ ನಾದದೊಂದಿಗೆ ತೆನೆಗೆ ಪೂಜೆ ಮಾಡಿ, ತೆನೆಯ ಹರಿವಾಣವನ್ನು ಗಂಧ ಮತ್ತು ಎಲೆ ಅಡಿಕೆಯ ತಾಂಬೂಲದೊಂದಿಗೆ ತಲೆಯ ಮೇಲೆ ಹೊತ್ತು ಮನೆಯ ಮುಂಬಾಗಿಲಿಗೆ ಬರುತ್ತಾನೆ. ಅಲ್ಲಿ ಮಡದಿ ಅಥವಾ ತಂಗಿ ಮಿಂದು ಮಡಿಯುಟ್ಟು (ಎಲೆ ಅಡಿಕೆ ತಿಂದು) ಬಾಗಿಲಲ್ಲಿ ತೆನೆ ಹೊತ್ತವರ ಕಾಲ್ತೊಳೆದು, ನಮಸ್ಕರಿಸಿ, ತೆನೆಯ ಮೇಲೆ ಹೂ ಅಕ್ಷತೆಗಳನ್ನು ಹಾಕಿ ಅಕ್ಷಯವಾಗಿ ಬಾ "ಒದಗೊದಗಿ ಬಾ" ಎಂದು ಪ್ರಾರ್ಥಿಸಿ ಸ್ವಾಗತಿಸುತ್ತಾಳೆ. ನಂತರ ತೆನೆಯನ್ನು ಮನೆಯ ಚಾವಡಿಯ ಮಣೆಯ ಮೇಲಿಟ್ಟು ಪುನಃ ಆರತಿ ಬೆಳಗುತ್ತಾರೆ. ಆಮೇಲೆ ತೆನೆಯೊಂದಿಗೆ ಹಲಸಿನ ಎಲೆ, ಮಾವಿನ ಎಲೆ, ಕವಲು ಎಲೆ, ಹಿಟ್ಟುಂಬಿ ಗಿಡ ಇಟ್ಟು ಅದನ್ನೆಲ್ಲ ಒಟ್ಟಿಗೆ ತೆಂಗಿನ ಹೆಡೆಯ ದಾರದಿಂದ ಸುಂದರವಾಗಿ ಪೋಣಿಸುತ್ತಾರೆ ಮತ್ತು ದೇವರ ಮಂಟಪ, ದ್ವಾರ ಬಾಗಿಲು, ಚಾವಡಿಯ ಕಂಬ, ತೊಟ್ಟಿಲು, ನೇಲು–ನೊಗ, ಕಳಸಿಗೆ, ಬಾವಿ, ಹಟ್ಟಿ ಹೀಗೆ ಮನೆಯ ಮತ್ತು ಬೇಸಾಯಕ್ಕೆ ಉಪಯೋಗಿಸುವ ಪ್ರಮುಖ ವಸ್ತುಗಳಿಗೆ ಕಟ್ಟುತ್ತಾರೆ.

ಹಿಂದೆ ಕುಂದಾಪುರ ಕಡೆಯಲ್ಲಿ ಮನೆಯ ಸೊಸೆ ಹೊಸ್ತಿಗೆ ಗಂಡನ ಮನೆಗೆ ಬರಲೇ ಬೇಕೆಂಬ ವಾಡಿಕೆ ಇತ್ತು. ಮೊದಲೆಲ್ಲ ಹೊಸ್ತಿನ ಅನ್ನ ಮಾಡಲು ಮಡಕೆ, ಇರ್ಕಿ (ಮಡಕೆಯ ಅಡಿಯಲ್ಲಿ ಇಡಲು ಒಣ ಹುಲ್ಲಿನಿಂದ ಮಾಡುವ ಗೋಲಾಕಾರದ ಒಂದು ವಸ್ತು) ಸಿಬ್ಲು (ಅನ್ನ ಬಸಿಯಲು ಉಪಯೋಗಿಸುವ ಮರದ ಬೀಳಿನಿಂದ ನೆಯ್ದು ಮಾಡುವ ಒಂದು ಸಾಧನ) ಎಲ್ಲವೂ ಹೊಸತನ್ನೇ ಉಪಯೋಗಿಸುತ್ತಿದ್ದರು. ಹೊಸ ಅನ್ನ ಮಾಡುವ ಮಡಕೆಯ ಮೇಲೆ ಸೇಡಿಯಿಂದ ಸೂರ್ಯ–ಚಂದ್ರರ ಚಿತ್ರ ಬಿಡಿಸುತ್ತಾರೆ. ಶುಭ ಮುಹೂರ್ತದಲ್ಲಿ 5 ಅಥವಾ 9

ಹೊಸ ಅಕ್ಕಿಯ ಕಾಳನ್ನು ವೀಳ್ಯದೆಲೆಯ ಮೇಲಿಟ್ಟು, ಅದರಿಂದ ಮಡಕೆಗೆ ಹಾಕುತ್ತಾರೆ. ಹೊಸ ಅಕ್ಕಿ ಅನ್ನ ಬೆಂದ ಮೇಲೆ ಅನ್ನ ಇಳಿಸಿ, ಅಡಿಗೆ ಮನೆಯ ರಂಗೋಲಿ ಮೇಲಿಟ್ಟು ಆರತಿ ಮಾಡಿ ನಮಸ್ಕರಿಸುತ್ತಾರೆ. ಕಾಶಿ ಕುಂಬಳಕಾಯಿ, ಹರಿವೆ ದಂಟು, ಕೆಸು ಇತ್ಯಾದಿ ತರಕಾರಿಗಳನ್ನು ಒಟ್ಟಿಗೆ ಹಾಕಿ ಒಂದು ವಿಶೇಷವಾದ ಪದಾರ್ಥ ಮಾಡುತ್ತಾರೆ. ಇದಕ್ಕೆ "ಕಾಯಿ ಮೇರ್ಲ" ಎನ್ನುತ್ತಾರೆ. ಮಧ್ಯಾಹ್ನದ ಊಟಕ್ಕೆ ಕೋಸಂಬರಿ, ಸಾರು, ತೊವೆ, ಹುಳಿ, ಪಲ್ಯ, ಪಾಯಸ ಹೀಗೆ 9 ಅಥವಾ 11 ಬಗೆಯ ಭರ್ಜರಿ ಅಡಿಗೆ ಮಾಡುತ್ತಾರೆ. ಮೊದಲು ಅಗಲಿದ ಹಿರಿಯರಿಗೆ ಮಿಸಾಲ್ ಇಟ್ಟು ಆಮೇಲೆ ನೆಂಟರಿಷ್ಟರು, ಮನೆಯವರು, ಕೃಷಿ ಕಾರ್ಮಿಕರು ಎಲ್ಲರೂ ಭೋಜನ ಸೇವಿಸುತ್ತಾರೆ. ಮನೆಯ ಸೊಸೆ ಊಟಕ್ಕೆ ಮೊದಲು ಅತ್ತೆಯ ಕಾಲಿಗೆ ನಮಸ್ಕರಿಸಿ "ಹೊಸ್ತ್ ಊಟ ಮಾಡುತ್ತೇನೆ ಮಾಯಿ" (ಹೊಸ್ತ್ ಉಂತಿ ಮಾಯಿ) ಎಂದು ಅತ್ತೆಯು ಆಶೀರ್ವಾದ ಪಡೆಯುವ ಸಂಪ್ರದಾಯವಿದೆ. ಹಿಂದಿನವರು ತನ್ನ ಮನೆಯ ಹೊಸ ಅಕ್ಕಿ ಅನ್ನ ಊಟ ಮಾಡುವ ಮೊದಲು, ಬೇರೆಯವರ ಮನೆಯಲ್ಲಿ ಹೊಸ್ತು ಊಟ ಮಾಡುತ್ತಿರಲಿಲ್ಲ. ಹೊಸ್ತಿನ ದಿನ ಊಟದ ನಂತರ ಮಕ್ಕಳಿಂದ ಹಿಡಿದು ದೊಡ್ಡವರ ವರೆಗೆ ಎಲ್ಲರೂ ಕಡ್ಡಾಯವಾಗಿ ವೀಳ್ಯ ಹಾಕುವುದು ಸಂಪ್ರದಾಯ. ಇದು ಶುಭ ಸಂಕೇತವೂ ಹೌದು ಮತ್ತು ಜೀರ್ಣ ಶಕ್ತಿಗೆ ಉತ್ತಮ ಔಷಧಿ ಕೂಡ.


**ಮಹಾಲಯ ಅಮಾವಾಸ್ಯೆ:–** ಪೂರ್ವಜರಿಗೆ ತರ್ಪಣ ನೀಡಲು ವಿಶೇಷವಾಗಿ ಪವಿತ್ರವಾದ ಪಿತೃ–ಪಕ್ಷದ ಕೊನೆಯ ದಿನವೇ ಮಹಾಲಯ ಅಮಾವಾಸ್ಯೆ. ಹಿಂದೂ ಪುರಾಣದ ಪ್ರಕಾರ ಈ ದಿನವನ್ನು ಅಪರ ಕರ್ಮಗಳು ಮತ್ತು ಕ್ರಿಯಾ ವಿಧಿಗಳನ್ನು ಮಾಡಲು ಅತ್ಯಂತ ಪ್ರಮುಖ ದಿನವೆಂದು ಪರಿಗಣಿಸಲಾಗುತ್ತದೆ. ಆದರೆ ನಮ್ಮ ಬಂಟ ಸಮುದಾಯದಲ್ಲಿ ಈ ದಿನದ ಆಚರಣೆ ಬಹಳ ಅಪರೂಪ. ಕುಂದಾಪುರದ ಕಡೆಯ ಕೆಲವು ಹಳ್ಳಿಗಳಲ್ಲಿ ಈ ದಿನದಂದು ಕುಟುಂಬದ ಮೂಲ ಮನೆಯಲ್ಲಿ "ಪಿತೃಗಳಿಗೆ ಪಡಿ ಕೊಡುವುದು" ಎನ್ನುವ ಒಂದು ಆಚರಣೆ ಇಂದಿಗೂ ಚಾಲ್ತಿಯಲ್ಲಿದೆ. ಆ ದಿನ ಬ್ರಾಹ್ಮಣರನ್ನು ಮೂಲ ಮನೆಗೆ ಆಹ್ವಾನಿಸಿ, ಕುಟುಂಬದ ಹಿರಿಯರೆಲ್ಲ ಸೇರಿ 2–3 ತಲೆಮಾರಿನಿಂದ ಆ ಕುಟುಂಬದಲ್ಲಿ ಸ್ವರ್ಗಸ್ಥರಾದ ಎಲ್ಲಾ ಸದಸ್ಯರನ್ನು ಸ್ಮರಿಸಿ, ಅವರ ಹೆಸರಿನಲ್ಲಿ ಬೇರೆ–ಬೇರೆಯಾಗಿ ಅಕ್ಕಿ, ತರಕಾರಿ, ತೆಂಗಿನಕಾಯಿ ಮತ್ತು ಕಾಣಿಕೆಯನ್ನು ದಾನವಾಗಿ ಕೊಡುತ್ತಾರೆ. ಮತ್ತು ಬ್ರಾಹ್ಮಣರು ಸಂತೃಪ್ತರಾಗಿ ದಾನ ನೀಡಿದ ಕುಟುಂಬವನ್ನು ಆಶೀರ್ವದಿಸುತ್ತಾರೆ.

**ನವರಾತ್ರಿ :** ವೈವಿಧ್ಯತೆಗೆ ಇನ್ನೊಂದು ಹೆಸರೇ ನವರಾತ್ರಿ ಎನ್ನಬಹುದು. ಶರದೃತು ಅಶ್ವಿನಿ ಮಾಸ, ಶುಕ್ಲ ಪಕ್ಷದ ಒಂಭತ್ತು ದಿನಗಳಿಂದ ಆಚರಿಸಲ್ಪಡುವ ನವರಾತ್ರಿ ನಾಡಿನಾದ್ಯಂತ ಪ್ರಸಿದ್ಧಿ ಹೊಂದಿದೆ. ನಮ್ಮಲ್ಲಿ ಹಬ್ಬ ಕೇವಲ ಪೂಜೆ ಪುನಸ್ಕಾರಗಳಿಗೆ ಮಾತ್ರ ಸೀಮಿತವಾಗಿಲ್ಲ, ಅದು ನಮಗೆ ಬಂಧು–ಬಾಂಧವರೊಡನೆ ಮತ್ತು ಸಮಾಜದೊಡನೆ ಬೆರೆಯಲು ಇರುವ ಒಂದು ಸೇತುವೆಯಾಗಿರುತ್ತದೆ. ನವರಾತ್ರಿಯಲ್ಲಿ ದುರ್ಗೆಯ ಒಂಭತ್ತು ಅವತಾರಗಳಾದ ಶೈಲ ಪುತ್ರಿ, ಬ್ರಹ್ಮಚಾರಿಣಿ, ಚಂದ್ರ ಘಂಟ, ಕೂಷ್ಮಂಡ, ಸ್ಕಂಧಮಾತಾ, ಕಾತ್ಯಾಯಿನಿ, ಕಾಳರಾತ್ರಿ, ಮಹಾಗೌರಿ ಹಾಗೂ ಸಿದ್ಧಿ ಧಾತ್ರಿಯನ್ನು ಕ್ರಮವಾಗಿ 9 ದಿನ ಆರಾಧಿಸುತ್ತೇವೆ. 10ನೇ ದಿನ ಮಹಾದೇವಿ ಮಹಿಷಾಸುರ ಮರ್ಧಿನಿಯಾಗಿ ಬಂದು ಲೋಕ ಕಂಟಕನಾಗಿದ್ದ ಮಹಿಷಾಸುರನನ್ನು ವಧಿಸಿದ ದಿನ. ಈ ದಿನ ಶಿಷ್ಟ ಶಕ್ತಿಯು ದುಷ್ಟ ಶಕ್ತಿಯ ಮೇಲೆ ವಿಜಯ ಸಾಧಿಸಿದ ದಿನವಾದ್ದರಿಂದ ಈ ದಿನವನ್ನು ವಿಜಯ ದಶಮಿ ಎಂದು ಆಚರಿಸುತ್ತೇವೆ. ಕುಂದಾಪುರದ ಕಡೆಯಲ್ಲಿ ನವರಾತ್ರಿಯಲ್ಲಿ ಇನ್ನೊಂದು ವಿಶೇಷವೆಂದರೆ ಹೂವಿನ ಕೋಲು. ಒಂದು ಸಮುದಾಯದವರು ಮನೆ–ಮನೆಗೆ ಬಂದು ಹೂವಿನ ಕೋಲು ನಡೆಸುವ ಸಂಪ್ರದಾಯವಿತ್ತು. ಮನೆಯ ಚಾವಡಿಯಲ್ಲಿ ಕುಳಿತು ಒಬ್ಬ ವ್ಯಕ್ತಿ ಪೌರಾಣಿಕದ ಒಂದು ಸಂದರ್ಭವನ್ನು ಹಿಮ್ಮೇಳದೊಂದಿಗೆ ಭಾಗವತಿಕೆ ಮಾಡುತ್ತಾರೆ. ಉಳಿದ ಇಬ್ಬರು ಹೂವಿನ ಕೋಲಿನೊಂದಿಗೆ ಎದುರು–ಬದುರಾಗಿ ಕುಳಿತು ಅದರ ಅರ್ಥವನ್ನು ವಿವರಿಸುತ್ತಾರೆ. ಬಹುಶಃ ನಮ್ಮ ಕರಾವಳಿಯ ಪ್ರಸಿದ್ಧ ಕಲೆಯಾದ ಯಕ್ಷಗಾನವನ್ನು ಉಳಿಸಿ–ಬೆಳೆಸಿ ಮನೆ–ಮನೆಗೆ ತಲುಪಿಸುವ ಉದ್ದೇಶವೇ ಈ ಸಂಪ್ರದಾಯವಿರಬಹುದು.

ನಮ್ಮ ಕರಾವಳಿಯ ದೇವಾಲಯಗಳಲ್ಲಿ 9 ದಿನದ ನವರಾತ್ರಿ ಉತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಆದರೆ ಬಂಟ ಸಮುದಾಯದವರ ಮನೆಗಳಲ್ಲಿ ಹೆಚ್ಚಾಗಿ ನವರಾತ್ರಿಯ ಕೊನೆಯ ದಿನದಂದು ದೇವಿಯನ್ನು ಪ್ರತಿಷ್ಠಾಪಿಸಿ ಶ್ರದ್ಧಾ ಭಕ್ತಿಯಿಂದ ವಿಶೇಷ ಪೂಜೆ

ಸಲ್ಲಿಸುತ್ತಾರೆ. ಕುಟುಂಬದ ಮೂಲ ಮನೆಯಲ್ಲಿ ಮಾತ್ರ ನವರಾತ್ರಿ ಆಚರಣೆ ನಡೆಯುತ್ತದೆ. ಕುಟುಂಬದ ಉಳಿದ ಸದಸ್ಯರೆಲ್ಲರೂ ಸೇರಿ ಪೂಜೆ-ಪುನಸ್ಕಾರಗಳಲ್ಲಿ ಭಾಗಿಯಾಗುತ್ತಾರೆ. ನವಮಿಯ ದಿನದಂದು ಶುಭ ಮುಹೂರ್ತದಲ್ಲಿ ಕಳಶ ಇಟ್ಟು ದೇವಿಯನ್ನು ಪ್ರತಿಷ್ಠಾಪಿಸಿ ಹೂ ಮತ್ತು ಚಿನ್ನಾಭರಣಗಳಿಂದ ಅಲಂಕರಿಸುತ್ತಾರೆ. 9 ಬಗೆಯ ವಿಧ-ವಿಧವಾದ ಭಕ್ಷ್ಯಗಳನ್ನು ಮಾಡಿ ದೇವಿಗೆ ನೈವೇದ್ಯ ಇಡುತ್ತಾರೆ. ಮತ್ತು ವಿಶೇಷ ಸಸ್ಯಾಹಾರದ ಅಡಿಗೆ ಮಾಡಿ ದೇವಿಗೆ ಬಡಿಸುತ್ತಾರೆ. ಕುಟುಂಬದ ಸದಸ್ಯರು, ಬಂಧು ಮಿತ್ರರೆಲ್ಲರೂ ಸೇರಿ ಭಕ್ತಿ-ಭಾವದಿಂದ ಭಜನೆ ಮಾಡುವ ಸನ್ನಿವೇಶ ತುಂಬಾ ವಿಶೇಷವಾಗಿರುತ್ತದೆ. ಎಲ್ಲವನ್ನೂ ಮರೆತು ಎಲ್ಲರೂ ಒಂದಾಗಿ ಭಕ್ತಿಯಲ್ಲಿ ತಲ್ಲೀನರಾಗಿ ದೇವಿಯನ್ನು ಧ್ಯಾನಿಸಿದಾಗ ನಿಜವಾಗಿಯೂ ಅಲ್ಲಿ ಒಂದು ದೈವೀ ಶಕ್ತಿಯ ಸ್ಥಾಪನೆಯಾಗುತ್ತದೆ. ಈ ಶಕ್ತಿಯೇ ನಮ್ಮೆಲ್ಲರನ್ನು ಕಾಪಾಡುವ ಆದಿಶಕ್ತಿ. ಈ ನವರಾತ್ರಿಯಲ್ಲಿ ದೇವಿ ಆದಿಶಕ್ತಿಯು ನಮ್ಮೊಳಗಿನ ದುಷ್ಟ ಗುಣಗಳನ್ನು ಸಂಹರಿಸಿ, ದೈವೀ ಶಕ್ತಿಯನ್ನು ಜಾಗೃತಗೊಳಿಸಿ, ನಮ್ಮನ್ನು ಆಶೀರ್ವದಿಸಲಿ ಎಂದು ಪ್ರಾರ್ಥಿಸೋಣ.

# ಪೊಸ ಪುದ್ವಾರ್



**ಸೀತಾರಾಮ ಶೆಟ್ಟಿ,**
**ಮಾಣೂರು**

ಕರಾವಳಿಯಲ್ಲಿ ನಿರ್ನಾಲ ತಿಂಗಳ ಕೊನೆ ಭಾಗ ಮತ್ತು ಬೊಂತೆಲು ತಿಂಗಳ ಆದಿಯಲ್ಲಿ 'ಏನೆಲು' ಕುಯ್ಲಿನ ಸಂಭ್ರಮ ಶುರುವಾಗುತ್ತದೆ. ಜಡವಾದ ಮಳೆಗಾಲ ಕಳೆದು ಎಳೆ ಬಿಸಿಲು ಶುರುವಾಗುವ ಸಮಯದಲ್ಲಿ ಕುಯಿಲು ಶುರುವಾಗುತ್ತದೆ. ಕರಾವಳಿಯಲ್ಲಿ ಅಂದಿನ ಮಳೆಗಾಲ ಬಹಳ ಕಷ್ಟದ ಬರಗಾಲದ ಸಮಯವಾಗಿತ್ತು. ಜಮೀನ್ದಾರರು ಗೇಣಿದಾರರು ಬಿಟ್ಟರೆ ಉಳಿದವರಿಗೆ ಬಹಳಷ್ಟು ಬಡತನವಿತ್ತು. ಅಂದಿನ ಕಾಲದಲ್ಲಿ ಉದ್ಯೋಗ, ಉದ್ಯಮಗಳು ಕಡಿಮೆ ಇದ್ದುದರಿಂದ ದುಡಿಮೆ ಮಾಡುವ ಅವಕಾಶವೇ ಇರಲಿಲ್ಲ. ಅಂದಿನ ಕಾಲದಲ್ಲಿ ಮನೆಯಲ್ಲಿ ಕೂಡು ಕುಟುಂಬದಂತಹ ದೊಡ್ಡ ಸಂಸಾರ ಇದ್ದವರು ಕೂಲಿ ಅರಸಿಕೊಂಡು ಘಟ್ಟದ ಮೇಲೆ ಅರೆಕಾಲಿಕ ವಲಸೆ ಹೋಗುವವರು ಇದ್ದರು. ಆದರೆ ಹೆಚ್ಚಿನ ಬಂಟ ಸಮಾಜದವರು ಜಮೀನ್ದಾರರು ಗೇಣಿದಾರರು ಆಗಿರುವುದರಿಂದ ಸ್ವಲ್ಪ ಮಟ್ಟಿನ ಬರಗಾಲ ಇದ್ದರೂ ಕಿತ್ತು ತಿನ್ನುವ ಬಡತನ ಇರಲಿಲ್ಲ ಎನ್ನುವುದು ಹೆಮ್ಮೆ ಪಡುವ ವಿಚಾರ.

ಏನಲು ಬೆಳೆಕುಯ್ದು ಹೊಸ ಅಕ್ಕಿ ಊಟಕ್ಕೆ ಪೊಸ ಪುದ್ವಾರ್ ಎಂದು ಕರೆಯುತ್ತಾರೆ. ಹೊಸ ಭತ್ತವನ್ನು ದೊಡ್ಡ 'ಚೆಂಬಿನ ಮಂಡೆಯಲ್ಲಿ' ರಾತ್ರಿ ಹೊತ್ತು ನೆನೆಸಿ ಬೆಳಿಗ್ಗೆ ಬೇಯಿಸಿ ಬಿಸಿಲಿನಲ್ಲಿ ಒಣಗಿಸಿ ಅಕ್ಕಿ ಮಾಡುವುದು ಹಿಂದಿನ ಪದ್ಧತಿ. ಹೊಸ ಭತ್ತ ಬೇಯಿಸುವುದೂ ಕೂಡ ಒಂದು ಸತ್ ಸಂಪ್ರದಾಯವಿದೆ. ಅಂಗಳದ ಒಂದು ಮೂಲೆಯಲ್ಲಿ ಒಲೆಯನ್ನು ರೆಡಿ ಮಾಡಿ ಅದಕ್ಕೆ ಸೆಗಣಿ ಸಾರಿಸಿ ಒಂದೆರಡು ಗೋಪಿ ಚಂದನದ ಅಥವಾ ಗಂಧದ ಬೊಟ್ಟಿಟ್ಟು ಅದರ ಮೇಲೆ ದೊಡ್ಡ ಚೆಂಬಿನ ಮಂಡೆಯಲ್ಲಿ ಬೇಯಿಸುತ್ತಾರೆ. ಚೆಂಬಿನ ಮಂಡೆಯನ್ನು ಚೌತಿ ಪೂಬಳ್ಳಿ ಮತ್ತು ಪೊಲಿ ಬಳ್ಳಿಯನ್ನು ಸುತ್ತಿ ಗಂಧದ ಬೊಟ್ಟಿಟ್ಟು ಅಲಂಕಾರ ಮಾಡುತ್ತಾರೆ. ಬೇಯಿಸಿ ಒಣಗಿಸಿ ಭತ್ತವನ್ನು ಒರಲಿನಲ್ಲಿ ಹಾಕಿ ಒನಕೆಯಲ್ಲಿ ಕುಟ್ಟಿ ಅಕ್ಕಿ ಮಾಡುತ್ತಾರೆ. ಈ ಅಕ್ಕಿಗೆ ಹೊಸ ಅಕ್ಕಿ ಅನ್ನುತ್ತಾರೆ. ಹೊಸ ಅಕ್ಕಿ ಊಟಕ್ಕೆ ಪೊಸ ಪುದ್ವಾರ್ ಎನ್ನುತ್ತಾರೆ. ಪುದ್ವಾರ್ ದಿವಸ ಅಡುಗೆ ಮನೆಯನ್ನು ಶುದ್ಧಮಾಡಿ ಒಲೆಗೆ (ಇದ್ದರೆ) ಸೆಗಣಿ ಸಾರಿಸಿ ಗಂಧದ ಬೊಟ್ಟಿಟ್ಟು ಅದರ ಮೇಲೆ ಬೆಳಗಿದ ಪಾತ್ರೆಗೆ ಗಂಧದ ಬೊಟ್ಟಿಟ್ಟು ಚೌತಿ ಪೂ ಮತ್ತು ಪೊಲಿ ಬಳ್ಳಿನಲ್ಲಿ ಅಲಂಕರಿಸಿ ಅದರಲ್ಲಿ ಹೊಸ ಅಕ್ಕಿಯನ್ನು ಹಾಕಿ ಮುತ್ತೈದೆಯವರು ಒಲೆ ಮೇಲಿಟ್ಟು ಬೇಯಿಸುತ್ತಾರೆ. ಪುದ್ವಾರ ಭೋಜನಕ್ಕೆ ಕೆಲವು ವಿಶೇಷ ತರಕಾರಿಗಳ ಪದಾರ್ಥ, ಪಲ್ಯ ತೀರ ಅವಶ್ಯ. ಮುಖ್ಯವಾಗಿ ತೇವು ಮತ್ತು ಪದ್‌ಪೆ (ಕೆಸುವಿನ ದಂಟು ಮತ್ತು ಹರಿವೆ ದಂಟು) ದಂಟಿನ ಸಾಂಬಾರು, ಎಳೆ ಸೌತೆಕಾಯಿಯ ಚೆಲ್ಲಿ, ಮುಳ್ಳು ಸೌತೆ (ಬೊಂಡಿನ) ತಿರುಳಿನ ಚಟ್ನಿ ಮತ್ತು ಹಲವಾರು ತರಕಾರಿಯ ಅಂದರೆ ಏಳು ಅಥವಾ ಒಂಭತ್ತು ಬಗೆಯ ಪಲ್ಯ ಮತ್ತು ಹುಳಿಗಳು ಸೇರಿಸಿ ಭರ್ಜರಿ ಭೋಜನ ವ್ಯವಸ್ಥೆ ಇರುತ್ತದೆ. ಇನ್ನು ಭೋಜನಕ್ಕೆ ನೆರೆ ಕರೆಯವರು ಮತ್ತು

ನಮ್ಮ ಮನೆಗೆ ಕೊಯಿಲು ಕೆಲಸಕ್ಕೆ ಬರುವ ಆಳುಗಳ ಕುಟುಂಬದ ಸದಸ್ಯರಿಗೆ ಭರ್ಜರಿ ಊಟದ ಏರ್ಪಾಡು ಮಾಡಿ ಸಂತೋಷ ಪಡುವುದಕ್ಕೆ "ಪೊಸ ಪುದ್ವಾರ್" ಎನ್ನುತ್ತಾರೆ. ಪುದ್ವಾರ್ ಭೋಜನ ಸವಿದ ಮೇಲೆ ಎಲೆ ಅಡಿಕೆ ಮೆದ್ದು ಬಾಯಿ ಕೆಂಪು ಮಾಡುವುದು ವಾಡಿಕೆ.

ಆದರೆ ಈಗ ಮನೆಯಲ್ಲಿರುವುದು ವೃದ್ಧ ದಂಪತಿಗಳು ಮಾತ್ರ. ಮಕ್ಕಳೆಲ್ಲಾ ವಿದ್ಯಾವಂತರಾಗಿ ಉದ್ಯೋಗ ಅರಸಿ ವಿದೇಶಗಳಿಗೆ ವಲಸೆ ಹೋಗಿ ವಾಸ್ತವ್ಯ ಹೂಡಿರುವುದರಿಂದ ಪುದ್ವಾರ್, ಮನೆ ತುಂಬಿಸುವ ಸಂಪ್ರದಾಯ ನೇಪಥ್ಯಕ್ಕೆ ಸೇರಿರುತ್ತದೆ. ಆದರೂ ಹಳೆ ಕಾಲದ ಕೃಷಿ ತೋಟಗಾರಿಕೆ ಸಂಪ್ರದಾಯ ಮರುಕಳಿಸಿ ಹಳೆ ಸಂಪ್ರದಾಯವನ್ನು ಹೊಸ ಮೆರುಗಿನೊಂದಿಗೆ ಆಚರಿಸಲು ಕಾಲಕಾಲಕ್ಕೆ ಸಮೃದ್ಧ ಮಳೆ ಬಂದರೂ ಉತ್ತಮ ಬೆಳೆ ಬೆಳೆದು ರೈತನ ಬಾಳು ಸಂಪನ್ನವಾಗಲೆಂದು ದೇವರಲ್ಲಿ ಪ್ರಾರ್ಥಿಸೋಣ.

# ಗುರುಪುರ ಬಂಟರ ಸಂಘ (ರಿ) ವಾರ್ಷಿಕ ಸಮಾವೇಶ ವಿದ್ಯಾರ್ಥಿವೇತನ ವಿತರಣೆ



"ಸಾಧನೆಯ ಗುರಿ ತಲುಪಬೇಕಾದರೆ ಕರ್ತವ್ಯದ ಅರಿವು ಇರಬೇಕು ಮತ್ತು ಅಂತಹ ಕರ್ತವ್ಯದ ಹುಚ್ಚು ಇಲ್ಲಿನ ಬಂಟರ ಸಂಘಕ್ಕಿದೆ. ವೈದ್ಯರು, ಇಂಜಿನಿಯರ್ ಅಥವಾ ಉನ್ನತ ಸ್ಥಾನಕ್ಕೇರಿದ ವ್ಯಕ್ತಿಗಳ ಸಾಧನೆ ಗುರುತಿಸಿ ಸನ್ಮಾನಿಸುವ ಬದಲಾಗಿ, ಸಾಧನೆಯ ಹಾದಿಯಲ್ಲಿರುವ ವಿದ್ಯಾರ್ಥಿಗಳು, ಕಷ್ಟದಲ್ಲಿರುವವರ ಗುರುತಿಸಿ ಸನ್ಮಾನಿಸುವುದು ಸಂಘದ ಆದ್ಯ ಕರ್ತವ್ಯ" ಎಂದು ದಕ ಜಿಲ್ಲಾ ಸಂಸದ ನಳಿನ್ ಕುಮಾರ್ ಕಟೀಲ್ ಹೇಳಿದರು.

ಗುರುಪುರ ಕುಕ್ಕುದಕಟ್ಟೆಯಲ್ಲಿ ಜಾಗತಿಕ ಬಂಟರ ಸಂಘಗಳ ಒಕ್ಕೂಟ, ಬೆಂಗಳೂರು ಬಂಟರ ಸಂಘ, ಬಂಟರ ಯಾನೆ ನಾಡವರ ಮಾತೃ ಸಂಘ ಮಂಗಳೂರು ಇದರ ಆಶ್ರಯದಲ್ಲಿ ಜರಗಿದ ಗುರುಪುರ ಬಂಟರ ಮಾತೃ ಸಂಘದ ವಾರ್ಷಿಕ ಸಮಾವೇಶ, ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಘದ ವತಿಯಿಂದ ಸಂಸದರಿಗೆ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ 90ಕ್ಕಿಂತ ಅಧಿಕ ಅಂಕ ಗಳಿಸಿದ ಮಕ್ಕಳನ್ನು ಸನ್ಮಾನಿಸಲಾಯಿತು. ಉಳಿದಂತೆ ಅರ್ಹ ವಿದ್ಯಾರ್ಥಿಗಳನ್ನು ಅಭಿನಂದಿಸಿ, ಕೆಲವು ಬಡ ಕುಟುಂಬಗಳಿಗೆ ನೆರವು ನೀಡಲಾಯಿತು. ಬೆಂಗಳೂರು ಉದ್ಯಮಿ ರವೀಂದ್ರನಾಥ ಮಾರ್ಲ (ಶೀಲಾ ಎಕ್ಯುಪ್‌ಮೆಂಟ್ಸ್) ಹಾಗೂ ಇತರ ಗಣ್ಯರು ಸಂಘದ ಸಾಧನೆಯ ಬಗ್ಗೆ ಗುಣಗಾನ ಮಾಡಿದರು. ಈ ವೇಳೆ ಸುಬ್ಬಯ್ಯ ಶೆಟ್ಟಿ ಲಿಂಗಮಾರುಗುತ್ತು ಅವರು ಗುರುಪುರ ಬಂಟರ ಸಂಘದ ಕಟ್ಟಡ ನಿರ್ಮಿಸಲು ದಾನ ಮಾಡಿದ ಒಂದು ಎಕ್ರೆ ಜಾಗದ ದಾಖಲೆಪತ್ರ ಹಸ್ತಾಂತರಿಸಿದರು.

ಸಂಘದ ಅಧ್ಯಕ್ಷ ಶ್ರೀ ರಾಜ್‌ಕುಮಾರ್ ಶೆಟ್ಟಿ ತಿರುವೈಲುಗುತ್ತು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಉಪಾಧ್ಯಕ್ಷ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಮಾತೃ ಸಂಘದ ಕಾರ್ಯದರ್ಶಿ ಶ್ರೀ ವಸಂತ ಶೆಟ್ಟಿಯವರು ಈ ಸಂದರ್ಭದಲ್ಲಿ ಮಾತನಾಡಿದರು.

# Professional Networking : Why LinkedIn?



**Mamtha Rai**

Active networking is vital to career growth. Often confused with selling, networking is about building long-term relationships and a good reputation over time. It involves meeting and getting to know people who you can assist, and who can potentially help you in return.

Benefits of professional networking include: strengthening business connections, exposure to new ideas, career advancement, job opportunities, career advice and support, and many more.

**LinkedIn**

LinkedIn is a social networking website designed for business professionals. It allows you to share work-related information with other users and keep an online list of professional contacts.

Profiles created within LinkedIn are business-oriented, not personal.

LinkedIn leverages your capabilities combining the benefits that social media and professional networking can provide. You can have different profile pages for each language you're fluent in.

Did you go to work today with a goal? What was it?

Meetings to attend, customers to take care of, emails - just another day filled with all you do at your job.

Or is it a day that changed your career story?

Start creating your story today.

Imagine a career where your stars align. Where you apply your experience, skills and talent to try new things.

Learn. Connect.

Thrive anywhere at your job. Dream of a career of broader possibilities. Take your career development to a whole new level. Make a difference to your team, your manager. And those you touch through your work. You are important!

Information is power. Recognize it.

In a shifting marketscape where you need to keep running to stay where you are, staying ahead means being informed. From an authoritative source. LinkedIn spans a whole gamut of information resources covering topics of strategic importance to your career. Whether it is top Industry news or the industry's most sought-after resources, your information is only a click away.

Leverage LinkedIn.

Let LinkedIn be a trusted and effective strategic consultant to your career and your role in your organization. Deliver and continuously improve your access to the authoritative information you need to strengthen your competitive advantage.

For the first time in the history of media, you can reach the world's professionals all in one place. More than 830M people worldwide gather on LinkedIn to stay connected and informed, advance their careers, and work smarter. Together they comprise the largest global community of business professionals. These are the decision-makers, influencers, and the leaders of today and tomorrow; precisely the people you want to target.

LinkedIn has career solutions for you.

What are your primary information needs to do your job better? Is it internal, external, or both?

Feeling lost surfing for the right information? LinkedIn puts you on the right track. Stay current on strategic topics. Develop business acumen and industry knowledge. Stay current on news of interest to your business. Gather information to make better strategic decisions.

Why should you care?

You have two options writing your career story-rely on luck and faith; or rely on a detailed plan.

Whatever you opt for, your story is important.

It is the making of YOUR career story. LinkedIn helps develop it. Nurture it.

Now, just multiply that story by the 830+ million LinkedIn users and you have impacted the direction of the entire Industry.

---

**ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ**

**'ದಸರಾ ಆಚರಣೆ'**

ದಿನಾಂಕ: 05.10.2019, ಶನಿವಾರ ಮಧ್ಯಾಹ್ನ 2.00 ರಿಂದ

- ದೇವಿ ಪೂಜೆ
- ಲಲಿತಾ ಸಹಸ್ರನಾಮ
- ಭಜನೆ
- ಧಾಂಡಿಯ ನೃತ್ಯ
- ಪ್ರಸಾದ ವಿತರಣೆ
- ಲಘು ಉಪಹಾರ

ಸದಸ್ಯರೆಲ್ಲರೂ ತಮ್ಮ ಬಂಧು–ಬಾಂಧವರೊಡಗೂಡಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಉಪೇಂದ್ರ ಶೆಟ್ಟಿ ಆರ್.**
ಅಧ್ಯಕ್ಷರು

**ಯೋಗ್ಯ ಎಲ್. ರೈ**
ಸಂಚಾಲಕಿ, ಮಹಿಳಾ ವಿಭಾಗ
ಮೊ: 9980892311

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ
ಮೊ: 9113859704 / 9945999255

**"ನೀವೆಲ್ಲರೂ ಬನ್ನಿ, ನಿಮ್ಮವರೆಲ್ಲರನ್ನೂ ಕರೆತನ್ನಿ"**

ಸದಸ್ಯೆಯರೆಲ್ಲರೂ ಸಾಂಪ್ರದಾಯಿಕ ಉಡುಗೆಯಲ್ಲಿ ಬರಬೇಕಾಗಿ ವಿನಂತಿ.

# ಇದು ಬಾಪೂಜಿ ಬೆಳಗಿದ ಭಾರತ



ಚೇರ್ಕಾಡಿ
ಸಚ್ಚಿದಾನಂದ ಶೆಟ್ಟಿ

**ಸತ್ಯ ಮೇವ ಜಯತೇ,**

**"ಸತ್ಯಕ್ಕಾಗಿ ಏನು ಬೇಕಾದರೂ ತ್ಯಾಗ ಮಾಡಿ ಆದರೆ ಯಾವ ಕಾರಣಕ್ಕೂ ಸತ್ಯವನ್ನು ತ್ಯಾಗ ಮಾಡಬೇಡಿರಿ"– ಗಾಂಧೀಜಿ.**

**"ಗಾಂಧೀಜಿಯವರನ್ನು ಕೊಲೆ ಮಾಡಿದ ಗುಂಡು ಸತ್ಯ ಅಹಿಂಸೆಯನ್ನೇ ಕೊಲೆ ಮಾಡಿತ್ತು"**

**"To be too good is too dangerous"**
- George Bernrad Shaw"

ಭಾರತದ ಶಾಂತಿದೂತ, ರಾಷ್ಟ್ರಪಿತ, ಭಾಗ್ಯವಿಧಾತ, ಪಿತಾಮಹ, ಮಹಾತ್ಮಾ ಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆ ನಡೆಯಲಿದೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಬಗ್ಗೆ "ಇಲ್ಲಿ ಬರೆದದ್ದು ಮುತ್ತು ಉಳಿದದ್ದು ಸಾಗರ" ಅವರು ತನ್ನ ಜೀವನ ಚರಿತ್ರೆಯನ್ನು ಬರೆದಾಗ "ಸತ್ಯದೊಂದಿಗೆ ನನ್ನ ಪ್ರಯೋಗಗಳ ಕಥೆ ಎಂದು ನಾಮಧೇಯ ಮಾಡಿದರು. (The Story of my experiment with truth). ಅವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ, ತಳೆದ ನಿಲುವುಗಳು, ಕಂಡ ಕನಸುಗಳು ನಾಡಿನ ಚರಿತ್ರೆಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಮುದ್ರಣಗೊಂಡು ಸರ್ವಕಾಲಿಕ ಸಮಂಜಸ ವಾಸ್ತವಾಂಶಗಳ ಶೋಧನೆಯ ಪ್ರತಿಬಿಂಬಗಳಾಗಿವೆ. ಅವರ ಚಿಂತನೆ ಮತ್ತು ಜಿಜ್ಞಾಸೆ ವಿಶ್ವವ್ಯಾಪಿಯಾಗಿದೆ.

ಸತ್ಯಾಗ್ರಹವೆಂದರೆ ಕೈಯಲ್ಲಿ ಬಂದೂಕು ಶಸ್ತ್ರಗಳಿಲ್ಲದೆ ಬ್ರಿಟಿಷರ ವಿರುದ್ಧ ಹೋರಾಡಿ ಸತ್ಯವೇ ನಮ್ಮ ಸರ್ವಕಾಲಿಕ ಆಯುಧವಾಗಬೇಕೆಂದು 1915 ರಲ್ಲಿ ಸ್ವಾತಂತ್ರ್ಯದ ಮುಂದಾಳತ್ವವನ್ನು ವಹಿಸಿಕೊಂಡರು. ಅವರ ಸತ್ಯದ ಮೇಲಿನ ಪ್ರಯೋಗಗಳೇ ದೇಶದ ಸ್ವಾತಂತ್ರ್ಯಕ್ಕೆ ನಾಂದಿಯಾಯಿತು. ಜನ ನಾಯಕನಾಗುವುದು ಸುಲಭ ಆದರೆ ಹೊಣೆ ದೊಡ್ಡದು ನಿಭಾಯಿಸಬೇಕೆಂದರು. ನಮ್ಮ ಜನ್ಮಭೂಮಿ, ಕರ್ಮ ಭೂಮಿ, ಪುಣ್ಯ ಭೂಮಿಯಾದ ಭರತ ಭೂಮಿಯ ಲಾಂಛನವೂ "ಸತ್ಯಮೇವಜಯತೇ".

"ಈ ಜಗತ್ತು ನೂರಾರು ಹಿಟ್ಲರ್‌ಗಳನ್ನು ಸೃಷ್ಠಿಸ ಬಹುದು ಆದರೆ ಒಬ್ಬ ಗಾಂಧಿಯನ್ನು ಸೃಷ್ಠಿಸಲು ಅಸಾಧ್ಯ". ಗಾಂಧೀಜಿಯವರು ಸೂಕ್ಷ್ಮ ಬುದ್ಧಿಯ, ಪಾಂಡಿತ್ಯದ ಚತುರರಾಗಿರಲಿಲ್ಲ. ಒಬ್ಬ ಸಾಮಾನ್ಯ ವ್ಯಕಿತ್ವದವರೇ ಆಗಿದ್ದರು. ಇವರು ಓರ್ವ ಸಾಮಾನ್ಯ ಮನುಷ್ಯರಾಗಿದ್ದರು. ಅವರಿಗೂ ತಮ್ಮದೇ ಆದ ಪ್ರಭಲ, ದುರ್ಬಲ ಗುಣಗಳಿದ್ದವು. ಆದರೆ ಮುಂದೆ ಇಡೀ ಜಗತ್ತೇ ಬೆರಗಾಗುವಷ್ಟು ಎತ್ತರಕ್ಕೆ ಬೆಳೆದರು. ಬಾಲ್ಯದಲ್ಲಿ ಮದುವೆ, ಒತ್ತಡಗಳ ನಡುವೆ ವಿದ್ಯಾಭ್ಯಾಸ, ಸಹವಾಸ ದೋಷ, ನೌಕರಿಯಲ್ಲಿ ಸೋಲು, ತಾಯಿಯ ಮರಣ, ಮಡದಿಯ ಮರಣ, ಬ್ರಿಟೀಷರಿಂದ ಅವಹೇಳನ, ಸತ್ಯಾಗ್ರಹಗಳಲ್ಲಿ ಸೋಲು, ಸೆರೆಮನೆ ವಾಸ ಎಲ್ಲಿಯೂ ವಿಚಲಿತರಾಗದೇ ಸ್ವಾತಂತ್ರ್ಯ ಸಂಗ್ರಾಮವೇ ಅವರ ಧ್ಯೇಯವಾಗಿತ್ತು.

ಒಬ್ಬ ವಕೀಲನಾಗಿ ಪ್ರಪ್ರಥಮ ಬಾರಿ ವಾದಿಸಬೇಕಾದ ಕೇಸ್‌ನಲ್ಲಿ ನಾಲಿಗೆಯಲ್ಲಿ ಮಾತೇ ಬಾರದೇ ಕೋರ್ಟ್ ಕೋಣೆಯಲ್ಲಿ ಎಲ್ಲರ ಎದುರು ಅಪಹಾಸ್ಯಕ್ಕೀಡಾದರು. ಛಲ ಬಿಡದ ಈ ವ್ಯಕ್ತಿ ಮುಂದೆ ದೊಡ್ಡ ದೊಡ್ಡ ನ್ಯಾಯಾಲಯಗಳಲ್ಲಿ ಬ್ರಿಟೀಷ್ ಗವರ್ನರ್, ವೈಸರಾಯ್‌ಗಳು, ಬ್ರಿಟನಿನ ಪ್ರಧಾನಿ ಬಗ್ಗೆ ತಮ್ಮ ದೇಶದ ಹಿತದೃಷ್ಟಿಯಲ್ಲಿ ಆತಂಕವಿಲ್ಲದೆ ವಾದಿಸಿದರು. ನಿರರ್ಗಳವಾಗಿ ಮಾತನಾಡುವ ಅದ್ಭುತ ಭಾಷಣಕಾರರಾದರು.

ಗಾಂಧೀಜಿಯವರು ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳು, ಗೀತೋಪದೇಶಗಳನ್ನು ಓದಿ ರಾಜಾ ಹರಿಶ್ಚಂದ್ರನ ನಾಟಕವನ್ನು ಬಾರಿ ಬಾರಿ ನೋಡಿ ಸತ್ಯಕ್ಕಾಗಿ ಎದುರಿಸಿದ ವಿದ್ರಾವಕ ಘಟನೆಗಳು ಕಷ್ಟ, ಕಠೋರ–ಸತ್ಯಗಳನ್ನು ಪರಾಮರ್ಶಿಸಿ – ರಾಜಾ ಹರಿಶ್ಚಂದ್ರ, ಸತ್ಯಹರಿಶ್ಚಂದ್ರನಾದಂತೆ ಗಾಂಧಿ ಮಹಾತ್ಮರಾದರು. ರಾಷ್ಟ್ರಪಿತರಾದರು. ಪಿತಾಮಹರಾದರು. "ಭಗವದ್ಗೀತೆ

ಗಾಂಧೀಜಿಗೆ ತಾಯಿಯಂತೆ". ಅಸತ್ಯಕ್ಕೆ ಪೂರ್ಣ ವಿರಾಮವಿಟ್ಟಿದ್ದಲ್ಲದೆ, ತಿಳಿಯದೇ ಮಾಡಿದ ತಪ್ಪಿಗೆ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಪಡುತ್ತಿದ್ದರು. ಇವರಿಗೆ ಧರ್ಮಕ್ಕಿಂತ ದೇಶಪ್ರೇಮ ಮಿಗಿಲಾಗಿತ್ತು. ಎಲ್ಲಾ ಧರ್ಮಗಳು ಬೋಧಿಸುವ ತತ್ವ ಒಂದೇ ಎಂದು ಅರಿತು ಕೊಂಡರು.

ಗಾಂಧೀಜಿಯವರ ಸತ್ಯ, ಧರ್ಮ, ಪ್ರಾಮಾಣಿಕತೆ, ನ್ಯಾಯ ನಿಷ್ಠೆಯನ್ನು ಅಪಾರವಾಗಿ ಮೆಚ್ಚಿಕೊಂಡ ಗುರುದೇವ ರವೀಂದ್ರನಾಥ ಠಾಗೋರರು ಪ್ರಪ್ರಥಮ ಬಾರಿಗೆ "ಮಹಾತ್ಮ" ಎಂದು ಕರೆದರು. ಸರೋಜಿನಿ ನಾಯ್ಡು 43 ವರ್ಷ ಗಾಂಧಿ ಶಿಷ್ಯೆ. ಅವರು "ರಾಷ್ಟ್ರಪಿತ" ನೆಂದು ಕರೆದರು. ಫ್ರೆಂಚ್ ಲೇಖಕ ರೊಮೆರೋಲಾ– ದುಂಡು ಮೇಜಿನ ಪರಿಷತ್ ಬಳಿಕ ಇವರನ್ನು "ವಿಶ್ವಾತ್ಮನೊಂದಿಗೆ ಒಂದಾದ ವ್ಯಕ್ತಿ" ಎಂದು ಪುಸ್ತಕ ಬರೆದರು.

ನನ್ನಷ್ಟೇ ಪ್ರಯತ್ನ, ಪರಿಶ್ರಮ ಪಡುವುದಾದರೆ ಶ್ರದ್ಧೆ ವಿಶ್ವಾಸವನ್ನು ಬೆಳೆಸಿಕೊಂಡದ್ದಾದರೆ ಯಾವುದೇ ಪುರುಷ ಅಥವಾ ಮಹಿಳೆ ನನ್ನಷ್ಟೇ ಸಾಧನೆ ಮಾಡಬಲ್ಲರು ಎನ್ನುವುದರ ಬಗ್ಗೆ ನನಗೆ ಎಳ್ಳಷ್ಟೂ ಸಂದೇಹವಿಲ್ಲ ಎಂದರು.

ಸತ್ಯವು ಶಾಂತಿಗಿಂತ ಹಿರಿದಾದುದ್ದು, ಸತ್ಯವೇ ದೇವರು, ಅಹಿಂಸೆ ಇಲ್ಲದೆ ಸತ್ಯ ಸಾಕ್ಷಾತ್ಕಾರ ವಾಗಲಾರದು, ಕರ್ತವ್ಯನಿಷ್ಠೆ ಜೀವನಕ್ಕೆ ಶಿಸ್ತಿನ ಪಾಠವನ್ನು ಕಲಿಸುತ್ತದೆ. ಅನುಭವ ಮತ್ತು ವಿದ್ಯೆ ವಿನಯವನ್ನು ಕೊಡುತ್ತದೆ. ಉತ್ತಮ ಜೀವನವೂ ಒಂದು ಕಲೆ – "ಅಲ್ಲದೆ ದುಃಖದಿಂದ ನೀರಿನಲ್ಲಿ ಮುಳುಗಿ ಸತ್ತವರಿಗಿಂತ ಮದ್ಯಪಾನದಲ್ಲಿ ಮುಳುಗಿ ಸತ್ತವರು ಹೆಚ್ಚು" ಎಂದರು.

ಸೃಷ್ಟಿಯ ನಿಜ ರೂಪಕ ಪಂಚ ಭೂತಗಳಾದ ಗಾಳಿ, ನೀರು, ಬೆಳಕು, ಆಕಾಶ, ಭೂಮಿ ಹಾಗೂ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ನಾಲಿಗೆ, ಮೂಗು, ಚರ್ಮ ಮತ್ತು ಪಂಚನೀತಿಗಳಾದ ಭಾವನೆ, ಯೋಚನೆ, ಮಾತು ಪ್ರಚಾರಗಳೆಂಬ ಸತ್ಯಕ್ಕೆ ಮಾರು ಹೋಗಿ ಸಾಧಿಸುವ ಸಾಧನ ಮಾರ್ಗವು ಶುಚಿಯಾಗಿರಬೇಕೆಂದು ಪ್ರಭಲವಾಗಿ ಪ್ರತಿಪಾದಿಸಿ ``end justifies the means'' ಎಂದರು. ಬ್ರಿಟಿಷರ ನೀತಿಯನ್ನು ವಿರೋಧಿಸಿದರೂ ಪ್ರತಿಯೊಬ್ಬ ಬ್ರಿಟಿಷನೂ ನನ್ನ ಮಿತ್ರರೆಂದು ನಂಬಿದರು.

ರಾಜಕೀಯದಲ್ಲಿ ಧಾರ್ಮಿಕ ನಿಷ್ಠೆ, ಅಸ್ಪೃಶ್ಯೋದ್ಧಾರ, ಹರಿಜನೋದ್ಧಾರ, ಸ್ವದೇಶಿ ಚಳುವಳಿ, ಖಾದಿ ಪ್ರಚಾರ, ಕೈನೂಲಿನ ಆಂದೋಲನ, ಗ್ರಾಮ ಸುಧಾರಣೆ, ಸಾಕ್ಷರತ ಪ್ರಚಾರ, ಪಾನ ನಿರೋಧ, ಹಿಂದೂ ಮುಸ್ಲಿಂ ಐಕ್ಯ, ಮೂಲಶಿಕ್ಷಣ, ಅಹಿಂಸಾತ್ಮಕ ಆಂದೋಲನಗಳು, ವಿದೇಶಿ ಬಟ್ಟೆಗಳ ಬಹಿಷ್ಕಾರ, ಉಪ್ಪಿನ ಸತ್ಯಾಗ್ರಹ, ಜಂಗಲ್ ಸತ್ಯಾಗ್ರಹ, ಮಾಡು ಇಲ್ಲವೇ ಮಡಿ, ಸತ್ಯಾಗ್ರಹಗಳಿಂದ ಜೈಲುವಾಸ, ಉಪವಾಸ, ಸತ್ಯಾಗ್ರಹಗಳು ಚಳುವಳಿಯ ನೆರಳಾಗಿ ನಡೆದು ಬಂದವು. ಯಾವುದೇ ಯೋಜನೆ ಅಸ್ಥಿತ್ವಕ್ಕೆ ತರುವಾಗ ಎಲ್ಲರೂ ತ್ಯಜಿಸಿದರೂ ಅವರು ಏಕಾಂಗಿಯಾಗಿ ಕೊನೆ ಮುಟ್ಟಿಸುತ್ತಿದ್ದರು. ಯಶಸ್ವಿಯಾಗದೇ ಇದ್ದಾಗ ಅಪರಾಧವಾಯಿತೆಂದು ಮಮ್ಮಲ ಮರುಗುತ್ತಿದ್ದರು. ಅವರ ಕ್ವಿಟ್ ಇಂಡಿಯಾ ಚಳುವಳಿ ಬ್ರಿಟಿಷರನ್ನು ನಡುಗಿಸಿತು. ಗಾಂಧಿ ಸಹಸ್ರಮಾನದ ಮಾನವನಾದರು. ಬಿಬಿಸಿ ನಡೆಸಿದ ಸಮೀಕ್ಷೆಯಲ್ಲಿ ಏಸು, ಐನ್‌ಸ್ಟೀನ್, ಕಾರ್ಲ್‌ಮಾರ್ಕ್‌ರನ್ನು ತಮ್ಮ ಸತ್ಯ ಮತ್ತು ಅಹಿಂಸೆಗಳೆಂಬ ಆಯುಧಗಳಿಂದ ಹಿಂದಿಕ್ಕಿದರು.

ಗಾಂಧೀಜಿಯಂತಹ ಮತ್ತೊಬ್ಬ ಮುಂದೆಯೂ ಹುಟ್ಟಲಾರನೇನೋ ಅವರು ಬರೆದ "ನನ್ನ ಕನಸಿನ ಭಾರತ" (India of my dream) ಸತ್ಯಾಗ್ರಹದ ಶಸ್ತ್ರಾಗಾರದಲ್ಲಿ ಉಪವಾಸ ಪ್ರಬಲ ಆಯುಧವಾಗಿದೆ ಎಂದುದಲ್ಲದೇ ಹಲವಾರು ಮೂಲಭೂತ ವಿಚಾರಗಳನ್ನು ಜನರ ಮನ ಮುಟ್ಟಿಸಿದರು–ಎಲ್ಲಿ ಶಾಂತಿ ಇಲ್ಲವೋ ಅಲ್ಲಿ ವಿಶ್ರಾಂತಿಯಿಲ್ಲ".

ಲಂಡನ್‌ಗೈಡ್, ಬಿಟ್ರೇಷರಲ್ಲಿ ವಿನಂತಿ, ಹಿಂದ್ ಸ್ವರಾಜ್, ದೇಶಕಟ್ಟುವ ಕೆಲಸ (Constructive programme), ಕಾರಾಗೃಹದ ಹಾಡು (Songs from the prison), ಆತ್ಮಕಥೆ (Experiment with truth) ನನ್ನ ಕನಸಿನ ಭಾರತ (India of my dreams), ಇವರ ಶ್ರೇಷ್ಠ ಕೃತಿಗಳು. ಮಿಗಿಲಾಗಿ ಈ ಮಾನವತಾವಾದಿಯ"ಬದುಕೇ ಮಹಾಕಾವ್ಯ", ಬದುಕು ಮತ್ತು ಬರಹಗಳು ಸಮಸ್ಯೆ ಗೊಂದಲಗಳಿಗೆ ಮಾರ್ಗೋಪಾಯ ನೀಡಬೇಕೆಂದರು.

ಬಡವರ, ಶೋಷಿತರ ನತದೃಷ್ಟರ, ನೊಂದವರ ಹಾಗೂ ತಿರಸ್ಕರಿಸಲ್ಪಟ್ಟವರ ಒಳಗೆ ಮಾನವೀಯ ಅನುಕಂಪವನ್ನು ಸೂಸಿ ದಲಿತೋದ್ಧಾರಕರಾದರು.

1947 ಆಗಸ್ಟ್ 14ರ ಮಧ್ಯರಾತ್ರಿ ಮೀರಿ ಒಂದು ನಿಮಿಷಕ್ಕೆ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಯಿತು, ಗಾಂಧೀಜಿ ಸ್ವಾತಂತ್ರ್ಯದ ಶಿಲ್ಪಿ ಎಂದೆನಿಸಿಕೊಂಡರು. ಇತ್ತ ದಿಲ್ಲಿ ಕೆಂಪು ಕೋಟೆಯಲ್ಲಿ ಸ್ವಾತಂತ್ರ್ಯದ ತ್ರಿವರ್ಣಧ್ವಜ ಹಾರುತ್ತಿದ್ದರೆ ಪಶ್ಚಿಮ ಬಂಗಾಲದ ಹಿಂದೂ ಮುಸ್ಲಿಂ ದಂಗೆ ಮತ್ತು ರಕ್ತಪಾತ ತಡೆಯಲು ಗಾಂಧೀಜಿ ಧಾವಿಸಿದರು.

ಯಾವ ಅಧಿಕಾರ ಲಾಲಸೆಯೂ ಇಲ್ಲದೆ, ಭಾರತಕ್ಕೆ ಭಾರತೀಯರಿಗಾಗಿ ಬಡಿದಾಡಿ, ಸ್ವಾರ್ಥತ್ಯಾಗಗೈದು, ಪ್ರಾಣವನ್ನೇ ಆಹುತಿಗೈದ ಮಹಾಯೋಗಿ ಮಹಾತ್ಮ.

ಅಂದು ಶುಕ್ರವಾರ ಜನವರಿ 30, 1948 ಕಾಲಮಾನ 5 ಘಂ. 12 ನಿ. ಗಾಂಧೀಜಿ ಪ್ರಾರ್ಥನಾ ಮಂದಿರದ ಮೆಟ್ಟಲೇರುವಾಗ ಹಂತಕನ ಪಿಸ್ತೂಲಿನ ಗುಂಡೇಟಿಗೆ ಬಲಿಯಾದರು "ರಘುಪತಿ ರಾಘವರಾಜಾರಾಂ, ಪತಿತ ಪಾವನ ಸೀತಾರಾಂ" ಎಂಬ ಮಂತ್ರ ಬೋಧಿಸಿದ, "ಈಶ್ವರ ಅಲ್ಲಾ ತೇರೋ ನಾಂ ಸಬ್‌ಕೋ ಸನ್ಮತಿ ದೇ ಭಗವಾನ್" ಎಂದ ಮಹಾಚೇತನ.

ಸ್ವಾತಂತ್ರ್ಯದ ಹಣತೆ ಸದಾ ಉರಿಯುತ್ತಿರಬೇಕು. ಕತ್ತಲು ಮಾಯವಾಗಿ ಚೈತನ್ಯ ನೀಡಬೇಕು. ಆದರೆ ಹಣತೆಯ ದೀಪಕ್ಕೆ ಎಣ್ಣೆ ಎರೆಯುವ ಬದಲು ಆ ದೀಪವನ್ನೇ ಬೆಂಕಿಯಾಗಿಸಿದ್ದಾರೆ. ನಮ್ಮ ತಾಯ್ನಾಡಿನ ಘನತೆ ಕುಂದಿದೆಯೇ? ನಮ್ಮ ಸ್ವಾತಂತ್ರ್ಯ ನಮಗೆ ಮುಳ್ಳಿನ ಬೇಲಿಯು ಮೇಲಿನ ಅರಿವೆ ಬಿಡಿಸಿದಂತಾಯಿತೇ? ಸ್ವಾತಂತ್ರ್ಯಕ್ಕಾಗಿ ಗಾಂಧಿ ಶಿಲ್ಪಿಯಾದರೂ ತ್ಯಾಗ ಬಲಿದಾನ ಮಾಡಿದ ಮಹಾನ್ ಚೇತನಗಳ ಜೀವನವನ್ನೇ ಪಗಡೆಯಾಗಿಟ್ಟವರಿಗೆ ನಾವು ಯಾವ ರೀತಿಯ ಅಶ್ರುತರ್ಪಣ ನೀಡುತ್ತಿದ್ದೇವೆ. ಪ್ರಚಲಿತ ದುರಂತಗಳು, ತ್ಯಾಗ ಅಸಂಖ್ಯಾತ ನಿಸ್ವಾರ್ಥಿಗಳು ಬಲಿದಾನ ಮಾಡಿ ದೊರೆತ ಸ್ವಾತಂತ್ರ್ಯ ಮತ್ತು ಅದರ ಶಿಲ್ಪಿ ಗಾಂಧಿಯವರ ಬಗ್ಗೆ ಒಂದೆರಡು ಪುಟದಲ್ಲಿ ಬರೆಯಲು ಸಾಧ್ಯವೇ?

# ನೀ ಪ್ರತ್ಯಕ್ಷ ದೇವರಂತೆ

ಮೂಡಣದಿ ರಂಗೇರಿದಾಗ ತಟ್ಟನೆ ಎಚ್ಚರಗೊಂಡಿದ್ದ
ರಾತ್ರಿ ಕನಸಿನಲಿ ನೀ ಬಂದು ಜೋಗುಳ ಹಾಡಿದಂತೆ
ತೊಟ್ಟಿಲಲಿ ಮಲಗಿಸಿದ ಮುತ್ತನಿತ್ತು ಲಾಲಿಸಿದಂತೆ
ಅಮ್ಮ ನೀನು ಪ್ರತ್ಯಕ್ಷ ದೇವರಂತೆ

ಬಿದ್ದಾಗ ಎಬ್ಬಿಸಿ ಕೈ ಹಿಡಿದು ನಡೆಸಲು ಕಲಿಸಿದವಳು
ತೊದಲು ನುಡಿದಾಗ ತಿದ್ದಿ ತೀಡಿದವಳು
ಅಕ್ಷರ ಜ್ಞಾನದ ಬೆಳಕು ತೂರಿದವಳು
ಅಮ್ಮ ನೀ ಶ್ರೀಗಂಧದಂತೆ

ತಾನು ಉಣ್ಣದೆ ನನಗೆ ಕೈತುತ್ತ ನಿತ್ತವಳು
ರಾತ್ರಿ ನಿದ್ರಿಸದೆ ಆರೈಕೆ ಮಾಡಿದವಳು
ಸದಾ ನನ್ನ ಬಗ್ಗೆಯೆ ಯೋಚಿಸುವವಳು
ಅಮ್ಮ ನೀ ಹುಣ್ಣಿಮೆ ಚಂದಿರನಂತೆ

ನೀನಿಂದು ಇಲ್ಲವಾದರೂ ಅಮ್ಮ
ನನ್ನ ಜೀವನ ಕಣ ಕಣಗಳಲೂ ತುಂಬಿರುವ
ನೆನಪಿಸಿದಾಗಲೆಲ್ಲ ನನ್ನೆದುರು ಬಂದು ನಿಲ್ಲುವೆ
ಅಮ್ಮ ನೀ ಕಾಮನ ಬಿಲ್ಲಿನಂತೆ

ಏನೇ ಕಷ್ಟ ಬಂದರೂ ನಿನ್ನದೇ ನೆನಪು
ನನ್ನ ಬಾಳಿಗೆ ನೀನೆ ದಾರಿದೀಪ
ನಿನ್ನ ನಿರ್ಮಲ ಪ್ರೀತಿಯೆ ನನ್ನ ಪಾಲಿನ ಶಕ್ತಿ
ಅಮ್ಮ ನೀ ತಂಗಾಳಿಯಂತೆ

ನೀನೆ ನಾನು ದಿನ ರಾತ್ರಿ ಪೂಜಿಸುವ ದೇವರು
ನನಗೆ ನೀನೆ ದೈವ ದೇವರು ಎಲ್ಲವೂ
ನಿನ್ನ ನೆನಪೆ ನನ್ನ ಧೀ ಶಕ್ತಿ
ನನ್ನ ಬದುಕೆಲ್ಲವೂ ನಿನ್ನ ದೇಣಿಗೆಯಮ್ಮ.

**ಡಾ. ಕರುಣಾಕರ ಎನ್. ಶೆಟ್ಟಿ ಪಣಿಯೂರು**

# ಬಂಟ ಸಮಾಜದ ಆರ್ಥಿಕ ಸಂಕಷ್ಟದಲ್ಲಿರುವವರಿಗೆ ಜಾಗತಿಕ ಬಂಟರ ಸಂಘಗಳ ಒಕ್ಕೂಟದಿಂದ ನೆರವು

ಬಂಟ ಸಮಾಜ ಬಂಧುಗಳಿಗೆ ಜಾಗತಿಕ ಬಂಟರ ಸಂಘದಿಂದ ಆರ್ಥಿಕ ಸಹಾಯ ಮಾಡಲಾಗುವುದು ಎಂದು ಒಕ್ಕೂಟದ ಅಧ್ಯಕ್ಷ ಐಕಳ ಶ್ರೀ ಹರೀಶ ಶೆಟ್ಟಿಯವರು ಮಾತೃ ಸಂಘ ಮಂಗಳೂರಿನ ಕಛೇರಿಯಲ್ಲಿ ಸುಮಾರು 40 ಮಂದಿ ಫಲಾನುಭವಿಗಳಿಗೆ ಪರಿಹಾರ ಧನ ವಿತರಿಸಿ ಮಾತನಾಡಿ ಸಂವಾದದಲ್ಲಿ ತಿಳಿಸಿದರು. ಏಪ್ರಿಲ್ 2019 ರಿಂದ ಆಗಸ್ಟ್ ತಿಂಗಳವರೆಗೆ ಸುಮಾರು ರೂ. 63 ಲಕ್ಷದವರೆಗೆ ನೆರವು ನೀಡಲಾಗಿದೆ. ಮುಖ್ಯವಾಗಿ ವೈದ್ಯಕೀಯ, ವಿದ್ಯಾಭ್ಯಾಸ, ಮನೆ ರಿಪೇರಿ ಹಾಗೂ ನಿರ್ಮಾಣಕ್ಕೆ ಆರ್ಥಿಕ ಸಹಾಯ ಮಾಡಲಾಯಿತು. ಅಲ್ಲದೆ ಪಿಯುಸಿ ಯಲ್ಲಿ ಹೆಚ್ಚು ಅಂಕ ಗಳಿಸಿದವರನ್ನು ಸನ್ಮಾನಿಸಲಾಯಿತು. ಒಕ್ಕೂಟದ ಉಪಾಧ್ಯಕ್ಷ ಕರ್ನಿರೆ ಶ್ರೀ ವಿಶ್ವನಾಥ ಶೆಟ್ಟಿಯವರು ಮಾತನಾಡಿ ಒಕ್ಕೂಟದಿಂದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಸಹಾಯ ಮಾಡಿದೆ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿಯವರು ಮಾತನಾಡಿ ಐಕಳ ಶ್ರೀ ಹರೀಶ್ ಶೆಟ್ಟಿ ಒಕ್ಕೂಟದ ಅಧ್ಯಕ್ಷರಾದ ನಂತರ ಸುಮಾರು ರೂ. ಒಂದು ಕೋಟಿ ಅರವತ್ತು ಲಕ್ಷಕ್ಕೂ ಮಿಕ್ಕಿ ಪರಿಹಾರ ಧನವನ್ನು ದಾನಿಗಳಿಂದ ಸಂಗ್ರಹಿಸಿ ಒಕ್ಕೂಟದ ಮೂಲಕ ಅರ್ಹ ಫಲಾನುಭವಿಗಳಿಗೆ ವಿತರಿಸಿದ್ದಾರೆ. ಸಮಾರಂಭದಲ್ಲಿ ಒಕ್ಕೂಟದ ಕಾರ್ಯಕಾರಿ ಸಮಿತಿ ಸದಸ್ಯರು, ಒಕ್ಕೂಟದ ಆಡಳಿತಾಧಿಕಾರಿ ಸಚ್ಚಿದಾನಂದ ಹೆಗ್ಡೆ ಕೊಳ್ಕೆಬೈಲ್ ಉಪಸ್ಥಿತರಿದ್ದರು.

# BUNTS' SANGHA RNS COMPOSITE P.U. COLLEGE INVESTITURE CEREMONY




**True leaders don't create followers ; they create more leaders !**

The Investiture ceremony for the Academic year 2019-20 was held at B.S.R.N.S Vidyaniketan and Comp. PU College on the 29th July 2019. The ceremony began with the school choir invoking the blessings of the Almighty. The elected members were bestowed with responsibilities according to their hierarchy. The Incharge Principal Smt. Anju R Naik administered the oath to the newly elected members of the Student Council followed by which Ms. Namratha Acharya, the Head Girl of College delivered the acceptance speech. The Chief Guest of the day Dr. C. Somashekara, IAS (Rtd.), stressed on the importance of leadership and their duties and responsibilities which is the need of the hour for the young generation. Shri. R. Updendra Shetty, President of Bunts' Sangha Bengaluru reiterated the contribution of the present generation towards the progress of the Nation. The student leaders walked with their head held high to impress that they are worthy of emulation.

# ಮುಕ್ತಿ–ಶಾಪದಿಂದ



ಸತೀಶ್ ಶೆಟ್ಟಿ ವಕ್ವಾಡಿ

ಬೇಸಿಗೆಯ ಬಿರು ಬಿಸಿಲು ಅಸಹನೀಯವಾಗಿತ್ತು. ಸೂರ್ಯನಿಗೆ ಅದ್ಯಾವಪರಿಯ ತಾಪವೋ ಗೊತ್ತಿಲ್ಲ, ದೇಹದ ಬೆವರನ್ನೆಲ್ಲ ಹಿಂಡಿ ಹೊರಗೆಳೆಯುತ್ತಿದ್ದ. ದಿನದ ಮೊದಲಾರ್ಧದ ಕೆಲಸ ಮುಗಿಸಿದ ಪ್ರತಾಪನಿಗೆ ಹೊಟ್ಟೆ ಚುರುಗುಟ್ಟುತ್ತಿತ್ತು. ರಾಜಾರಾಮ ಭಟ್ರ ಮನೆಯ ಕೆರೆಬದಿಯ ಸುಮಾರು ಇಪ್ಪತ್ತು ತೆಂಗಿನ ಮರದ ಕಾಯಿಕಿತ್ತು, ಅವನ್ನು ಅವರ ಕೊಟ್ಟಿಗೆಯ ಸ್ಟೋರ್ ರೂಮ್‌ಗೆ ಸೇರಿಸುವ ಹೊತ್ತಿಗೆ ತೊಡೆಸಂದಿ ಕಾದ ಕಬ್ಬಿಣದಂತಾಗುತ್ತಿತ್ತು. ಭಟ್ರ ಕೆರೆಬದಿ ತೆಂಗಿನ ಮರಗಳ ಸೈಜಿನ ಬಗ್ಗೆ ಇಡೀ ಊರಿಗೆ ಕೌತುಕವಿತ್ತು. ಅಂತಹ ಗಾತ್ರದ ಮರಗಳು ಅವು.

ರಾಜಾರಾಮ ಭಟ್ರ ಮನೆ ಹೊಸ ಬಣ್ಣದಿಂದ ಸಿಂಗಾರಗೊಂಡು ಕಂಗೊಳಿಸುತ್ತಿತ್ತು. ಇನ್ನು ಮೂರು ದಿನಕ್ಕೆ ಅವರ ತಂದೆಯ ಶ್ರಾದ್ಧ, ಜೊತೆಗೆ ಅವರು ಹುಟ್ಟಿ ನೂರು ವರ್ಷವಾಗಿತ್ತು. ತಂದೆಯ ಹುಟ್ಟಿದ ದಿನ ಗೊತ್ತಿಲ್ಲದ ಕಾರಣ, ರಾಜಾರಾಮ ಭಟ್ರು ತಂದೆಯ ಶತಮಾನೋತ್ಸವವನ್ನು ಅವರ ಶ್ರಾದ್ಧದ ದಿನವೇ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿದ್ದರು. ಊರಿಗೆಲ್ಲ ಆಮಂತ್ರಣವಿತ್ತು, ಎರಡು ಸಾವಿರ ಜನರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಹಿನ್ನೆಲೆಯಲ್ಲೇ ಪ್ರತಾಪ ಕಾರ್ಯಕ್ರಮಕ್ಕೆ ಬೇಕಾದ ತೆಂಗಿನ ಕಾಯಿ, ಸಿಯಾಳ, ಹೂವಿನಕೊನೆ, ಅಡಿಕೆಯನ್ನೆಲ್ಲ ಕುಯ್ದು ಕೊಟ್ಟಿಗೆಯಲ್ಲಿ ಸೇರಿಸಿದ್ದ.

"ಪ್ರತಾಪ ನಾಡಿದ್ದು ಬುಧವಾರ ಗೊತ್ತಲ್ಲ, ಅಪ್ಪಯ್ಯಂದು ಶ್ರಾದ್ಧ ಜೊತೆಗೆ ಶತಕ ಬೇರೆ ಇದೆ, ಗಡ್ಜ್ ಇತ್. ಹೆಣ್ತಿ ಮಕ್ಳನ ಕರ್ಕೊಂಡು ಬಾರಾ ಆಯ್ತಾ. ಪ್ರತಾಪನ ಕೈಗೆ ಕಾಯಿ ತೆಗೆದ ಕಾಸು ನೀಡುತ್ತಾ ರಾಜಾರಾಮ ಭಟ್ರು ನುಡಿದರು.

"ಆಯ್ತ್ ಅಯ್ಯ, ಬತ್ತೆ. ನಿಮ್ಮನಿ ಊಟನ ಯಾವತ್ತಾದ್ರೂ ಮಿಸ್ ಮಾಡಿದ್ನಾ ಹೇಳಿ. ಚೆಣ್ ಹುಡ್ಗ ಇಪ್ಪತಿಗೆ ಅಪ್ಪಯ್ಯನ್ ಜೊತೆ ಬರ್ತಿದ್ದೆ, ನಿಮ್ ಮನಿಯಲ್ ಮಾಡೋ ಲಾಡು ಮತ್ ಜಿಲೇಬಿನ ಬಿಡುಕ್ ಆತ್ತಾ. ಬಂದೆ ಬತ್ತಿ ಅಯ್ಯ" ಅಂದ ಪ್ರತಾಪ, ಭಟ್ರ ಸೊಸೆ ಮಕ್ಕಳಿಗೆ ಕೊಡು ಅಂತ ಕೊಟ್ಟ ಹಲಸಿನ ಇಡ್ಲಿಯ ಗಂಟನ್ನು ಬೊಗಸೆಯಲ್ಲಿ ಭದ್ರವಾಗಿಸಿಕೊಂಡು ಮನೆಕಡೆ ನಡೆದ.

ಹೌದು ಈತ ಪ್ರತಾಪನೇ, ಕಾಲಗರ್ಭದ ಶಾಪದಿಂದ ಮತ್ತೆ ಕತೆಯಾಗಲು ಬಂದ ಅದೇ ರಾಮನ ಮಗ. ಕಾಲದ ಜೊತೆ ಬದಲಾಗುತ್ತ, ಜಗತ್ತು ಮಗ್ಗಲು ಬದಲಾಯಿಸಿದಂತೆ ಪ್ರತಾಪ ಬದಲಾಗಿದ್ದ. ಆತ ಹೈಸ್ಕೂಲಿನಲ್ಲಿ ಇರುವಾಗ ತಂದೆಯನ್ನು ಕಳೆದುಕೊಂಡಿದ್ದ. ಅಂದು ಮಳೆಗಾಲದ ಒಂದು ಸಂಜೆ, ರಾಮ ಪೇಟೆಯಿಂದ ಮನೆಗೆ ಬರುವ ವೆಂಕಟೇಶ ನಾಯಕರ ಮನೆಯ ಕಾಲುದಾರಿಯ ಪಕ್ಕದ ಕೆರೆಯಲ್ಲಿ ಹೆಣವಾಗಿ ತೇಲುತ್ತಿದ್ದ. ಪಕ್ಕದ ಹಳೇಮಠ ಊರಿನ ಬುಡಾನ ಸಾಹೇಬರ ಮನೆಯ ತೆಂಗಿನ ತೋಟದ ಕಾಯಿ ತೆಗೆಯಲು ಹೋಗಿದ್ದ ರಾಮ, "ಸಂಜೆ ಸಾರಾಯಿ ಅಂಗಡಿಯಲ್ಲಿ ಸ್ವಲ್ಪ ಜಾಸ್ತಿ ತೀರ್ಥ ಸೇವನೆ ಮಾಡಿದ್ದರಿಂದ ಕೆರೆ ಹತ್ತಿರ ಬರುವಾಗ ಕಾಲು ಜಾರಿ ಬಿದ್ದು ಸತ್ತಿದ್ದಾನೆ" ಅಂತ ಊರ ಮಹನೀಯರ ತೀರ್ಮಾನಕ್ಕೆ ಎಲ್ಲ ತಲೆ ಬಾಗಿದರು. ಆದರೆ ತನ್ನ ಅಪ್ಪ ಅದ್ಭುತ ಈಜುಗಾರನಾಗಿದ್ದ, ಕುಡಿತದ ಅಮಲಿನಲ್ಲಿ ನೀರಿಗೆ ಬಿದ್ದಾಗ ಈಜಲು ಮರೆತಿರಬಹುದು ಅಂತ ಪ್ರತಾಪ ಶಾಲೆಯಲ್ಲಿ ಗೆಳೆಯರ ಹತ್ತಿರ ಹೇಳಿಕೊಂಡಿದ್ದ. ಗಂಡ ಸತ್ತ ಮೇಲೆ ಪ್ರತಾಪನ ತಾಯಿ ಮಕ್ಕಳನ್ನು ಸಾಕಲು ಕೂಲಿ ಕೆಲಸಕ್ಕೆ ಹೋಗತೊಡಗಿದಳು.

ಶಾಲೆಗೇ ರಜೆ ಇರುವಾಗಲೆಲ್ಲ ಅಮ್ಮನ ಜೊತೆ ಅವರಿವರ ಮನೆ ತೋಟದ ಕೆಲಸಕ್ಕೆ ಹೋಗುತ್ತಿದ್ದ ಪ್ರತಾಪ ನಿಧಾನವಾಗಿ ಮರ ಹತ್ತುವುದನ್ನು ಕಲಿತುಕೊಂಡ. ಅಂದು ಅರ್ಜೆಂಟ್ ಇದೆ ಎಂದು ಮನೆ ಪಕ್ಕದ ವೆಂಕಟೇಶ್ ನಾಯಕರಿಗೆ ನಾಲ್ಕೈದು ಮರ ಹತ್ತಿ ಕಾಯಿ ತೆಗೆದು

ಕೊಟ್ಟಿದ್ದಕ್ಕೆ ಅವರು ಕೊಟ್ಟ ಐವತ್ತು ರೂಪಾಯಿ ಅವನನ್ನು ವೃತ್ತಿಪರ ಮರಹತ್ತುವವನನ್ನಾಗಿ ಮಾಡಿಸಿತು. ಹಾಗೆ ನಿಧಾನವಾಗಿ ತನ್ನ ವೃತ್ತಿ ಆರಂಭಿಸಿದ ಪ್ರತಾಪ ದಿನಕ್ಕೆ ನೂರೋ ಇನ್ನೂರೋ ದುಡಿಯಲಾರಂಭಿಸಿದ. ಕೈ ಹತ್ತಿದ ದುಡಿತ ಶಾಲೆ ಬಿಡಿಸಿತು. ಅಮ್ಮನಿಗೆ ಉಬ್ಬಸದ ಕಾಯಿಲೆ ಬಂದಿದ್ದರಿಂದ ಇಪ್ಪತ್ತನೇ ವಯಸ್ಸಿಗೆ ಕಾನೂನು ಉಲ್ಲಂಘಿಸಿ ಹದಿನಾರು ಹರೆಯದ ಪಕ್ಕದ ಊರಿನ ಗುಲಾಬಿಯನ್ನು ಮದುವೆಯಾಗಿ ಅಷ್ಟೇ ವೇಗದಲ್ಲಿ ದೇಶದ ಜನಸಂಖ್ಯೆಗೆ ಇನ್ನು ಇಬ್ಬರನ್ನು ಸೇರಿಸಿಬಿಟ್ಟಿದ್ದ. ಈಗ ಸುತ್ತಲಿನ ಮೂರ್ನಾಲ್ಕು ಊರಿಗೆ ತೆಂಗಿನ ಕಾಯಿ ತೆಗೆಯಲು ಹಳೆ ಎಂ ಯ್ಯೆ ಟಿ ಯಲ್ಲಿ ಬರುವ ರಾಮನ ಮಗ ಪ್ರತಾಪನೇ ಗತಿ.

"ಅಲ್ಲ ಪ್ರತಾಪ, ಇವಾಗ ನೀವೆಲ್ಲ ದೊಡ್ಡ ಜನಾ ಅಯಿರ್ ಅಲ್ದನ, ಇಡೀ ಊರೇ ಬಂದಿದೆ. ಅದ್ರೆ ನಿಂಗ್ ಮಾತ್ರ ಬಾಪ್ಪುಕೆ ಐಲಾ, ಇನ್ ನಿಮ್ಮನೆಲ್ಲೆ ಹಿಡುದು ಕಷ್ಟ ಅನ್ಸುತ್ತೆ" ತನ್ನ ತಂದೆಯ ಶತಕದ ಕಾರ್ಯಕ್ರಮಕ್ಕೆ ಬಾರದ ಪ್ರತಾಪನನ್ನು ರಾಜಾರಾಮ ಭಟ್ರ ತರಾಟೆಗೆ ತೆಗೆದುಕೊಂಡರು.

"ಅಯ್ಯ ಬರ್ಬೇಕ್ ಅನ್ಕೊಂಡಿದ್ದೆ, ಆವತ್ತು ಕೋರ್ಟ್ ಇತ್ತು, ಅದೆ ಮುಗುವತ್ತಿಗೆ ಲೇಟ್ ಆಯ್ತ್ ನಿಮ್ಮ ಮಗ ವಸಂತಯ್ಯ ಜೂನಿಯರ್ ಲಾಯರ್ ಸಿ ಎಸ್ ಪಿ ಬೇರೆ ಬಾರಿ ಸ್ಲೋ ತುಂಬಾ ಲೇಟ್ ಮಾಡ್ಬಿಟ್ಟ, ಆ ಕೇಸ್ ಬೇರೆ ವೆಂಕಟೇಶ್ ನಾಯಕರ ಪರ ಹೋಪಂಗಿದೇ. ಅದೇ ತಲೆಬಿಸಿಯುಲ್ಲಿ ಬಪ್ಪುಕ್ ಆಯಿಲ, ಬೇಜಾರ್ ಮಾಡ್ಕಂಬೇಡಿ ಅಯ್ಯ" ಪ್ರತಾಪ ಅಸಹಾಯಕ ಸೇನಾನಿಯೇತ ನುಡಿದ.

"ಹೌದ, ಮತ್ ವಸಂತ ಕೇಸ್ ನಿನ್ ಕಡೆಗೆ ಆತ್ಅಂತಿದ್ದ ಅದ್ಕ್. ನಾನ್ ನಿರಾಳ ಆಗಿದ್ದೆ. ಈ ಲಾಯರ್‌ಗಳು ಅಪ್ಪಂಗೂ ಸುಳ್ಳು ಕೇಳ್ತಾರ್ ನೋಡ್" ಭಟ್ರು ತನ್ನ ಮಗನ ಬಗ್ಗೆ ಅಸಮಾಧಾನದ ಹೊಗೆ ಚೆಲ್ಲಿದರು.

ಹೌದು ಎರಡು ತಲೆಮಾರಿನಿಂದ ಆ ವ್ಯಾಜ್ಯ ನಡೆಯುತ್ತಿತ್ತು. ಅದು ಸುಮಾರು ಎರಡು ಎಕ್ರೆ ತೋಟಕ್ಕೆ ಸಂಬಂಧ ಪಟ್ಟಿದ್ದು. ಪ್ರತಾಪ ಮತ್ತು ವೆಂಕಟೇಶ ನಾಯಕರ ಮನೆಗಳ ಮಧ್ಯದ ಜಾಗ ಅದು. ತಲೆಮಾರುಗಳಿಂದ ಅದನ್ನು ಪ್ರತಾಪನ ಮನೆಯವರೇ ಅನುಭವಿಸಿಕೊಂಡು ಬಂದಿದ್ದರು. ಸುಮಾರು ಇಪ್ಪತ್ತು ವರ್ಷದ ಹಿಂದೆ ರಾಮ ಅದನ್ನು ತೋಟ ಮಾಡಲು ಹೊರಟಾಗ ನಾಯಕರು ತಗಾದೆ ತೆಗೆದಿದ್ದರು. ಆ ಜಾಗ ತನಗೆ ಸೇರಿದ್ದು ಎಂದು ತೋಟವನ್ನು ರಾತ್ರೋ ರಾತ್ರಿ ನಾಶ ಮಾಡಿದ್ದರು. ಜಾಗ ಸರಕಾರೀ ಕುಮ್ಕಿ ಆಗಿದ್ದರಿಂದ ರಾಮ ಅದನ್ನು ಅಕ್ರಮ ಸಕ್ರಮದಲ್ಲಿ ಅರ್ಜಿ ಹಾಕಿ ಹಕ್ಕು ಪತ್ರ ಪಡೆದಿದ್ದ. ಆದರೆ ವೆಂಕಟೇಶ ನಾಯಕರು ತನ್ನ ಗುಂಡಾಗಿರಿಯಿಂದ ರಾಮ ತೋಟಕ್ಕೆ ತಡೆಯೊಡ್ಡಿದ್ದರು. ರಾಮ ಸತ್ತ ಮೇಲೆ ಜಾಗ ಪಾಳು ಬಿದ್ದಿತ್ತು. ಮುಂದೆ ಪ್ರತಾಪ ದೊಡ್ಡವನಾದ ಮೇಲೆ ಮತ್ತೆ ತೋಟ ಮಾಡಲು ಮುಂದಾದಗ ಮತ್ತೆ ವೆಂಕಟೇಶ್ ನಾಯಕ್ ಮತ್ತು ಅವರ ಮಗ ಚಿರಂಜೀವಿ ಅಡ್ಡ ಬಂದು ಒಂದಷ್ಟು ದಾಂಡಿಗರನ್ನು ಇಟ್ಟುಕೊಂಡು ತಾವೇ ತೋಟ ಮಾಡಲು ಆರಂಭಿಸಿದರು. ಆಗ ಪ್ರತಾಪನ ನೆರವಿಗೆ ಬಂದ ರಾಜಾರಾಮ ಭಟ್ರು ಮಗ ವಸಂತನಿಗೆ ಹೇಳಿ ಕೋರ್ಟ್ ಕೇಸು ಹಾಕಿ ಸ್ಟೇ ಆರ್ಡರ್ ತಂದಿದ್ದರು. ಇದೆಲ್ಲ ಆಗಿ ಐದಾರು ವರ್ಷಗಳಾದರೂ ಕೇಸು ಮುಗಿದಿರಲಿಲ್ಲ.

"ಎಂತ ಹೇಳುದು ಅಯ್ಯ, ಚಿನ್ನದಂತ ಜಾಗ, ತೋಟ ಮಾಡ್ರೆ ನಮ್ಮ್ ಹೊಟ್ಟೆಪಾಡಿಗೆ ಆತಿತ್ತ್, ಇನ್ನೆಷ್ಟು ವರ್ಷ ಅಂತ ಮರಹತ್ಕೊಂಡು ಇರ್ಲಿ ಹೇಳಿ, ತೋಟಗೀಟ ಮಾಡ್ಕಂಡು ಸ್ವಲ್ಪ ನೆಮ್ಮದಿಯಾಗಿ ಇಪ್ಪ ಅನ್ಕೊಂಡ್ರೆ ಹಿಂಗಾಯ್ತು". ಪ್ರತಾಪನ ಕಣ್ಣಂಚಿನಲ್ಲಿ ಚಿಮ್ಮಿದ ನೀರು ರಾಜಾರಾಮ ಭಟ್ರ ಕರುಳಿಗೆ ನಾಟಿತ್ತು.

